ವಿಜಯಪುರ | ಸಂಪುಟ 04 | ಸಂಚಿಕೆ 193 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಗುರುವಾರ, ಸೆಪ್ಟೆಂಬರ್, 24, 2026

"ಪೌರ ಕಾರ್ಮಿಕರಿಗಾಗಿ ಸರ್ಕಾರದ ಯೋಜನೆಗಳ ಸೌಲಭ್ಯವನ್ನು ಅವರೆಲ್ಲರೂ ಸದುಪಯೋಗ ಮಾಡಿಕೊಳ್ಳಬೇಕಿದೆ. ಸರ್ಕಾರದ ಎಲ್ಲ ಯೋಜನೆಗಳನ್ನು ನಗರದ ಪೌರಕಾರ್ಮಿಕ-ರಿಗೆ ಅಧಿಕಾರಿಗಳು ಆದ್ಯತೆ ಮೇರೆಗೆ ನೀಡಬೇಕು."



■ ಡಾ.ಆನಂದ ಕೆ
ಜಿಲ್ಲಾಧಿಕಾರಿ, ವಿಜಯಪುರ

## ವಿಜಯಪುರದಲ್ಲಿ ನಡೆದ ಪೌರಕಾರ್ಮಿಕರ ದಿನಾಚರಣೆಯಲ್ಲಿ ಮಹಾನಗರ ಪಾಲಿಕೆ ಮೇಯರ್ ಮಡಿವಾಳಪ್ಪ ಕರಡಿ ಹೇಳಿಕೆ

# ಪೌರಕಾರ್ಮಿಕರ ಆರೋಗ್ಯ–ಮಕ್ಕಳ ಶಿಕ್ಷಣಕ್ಕೆ ಆದ್ಯತೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದ ಸ್ವಚ್ಛತೆ ಹಾಗೂ ನೈರ್ಮಲ್ಯ ಕಾಪಾಡುವಲ್ಲಿ ಪೌರಕಾರ್ಮಿಕರ ಸೇವೆ ಅತ್ಯಂತ ಮಹತ್ವದ್ದಾಗಿದ್ದು, ಪೌರಕಾರ್ಮಿಕರು ನಗರದ ಬೆನ್ನೆಲುಬಾಗಿದ್ದಾರೆ ಎಂದು ಮಹಾನಗರ ಪಾಲಿಕೆ ಮೇಯರ್ ಮಡಿವಾಳಪ್ಪ ಕರಡಿ ಹೇಳಿದರು.

ನಗರಾಭಿವೃದ್ಧಿ ಇಲಾಖೆ, ಜಿಲ್ಲಾಡಳಿತ ಹಾಗೂ ಮಹಾನಗರ ಪಾಲಿಕೆ ಸಹಯೋಗದಲ್ಲಿ ಮಂಗಳವಾರ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಆಯೋಜಿಸಿದ್ದ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪೌರಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸಿ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಮಹಾನಗರ ಪಾಲಿಕೆ ಬದ್ಧವಾಗಿದೆ. ಸಕಾಲದಲ್ಲಿ ವೇತನ ಪಾವತಿ ಸೇ-ರಿದಂತೆ ವಿವಿಧ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದ್ದು, ಸರ್ಕಾರದ ವಿವಿಧ ಇಲಾಖೆಗಳ ಮೂಲಕ ದೊರೆಯುವ ಯೋಜನೆಗಳ ಪ್ರಯೋಜನವನ್ನು ಪೌರಕಾರ್ಮಿಕರು ಪಡೆದುಕೊಳ್ಳಬೇಕು ಎಂದು ಮೇಯರ್ ಕರೆ ನೀಡಿದರು.

ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ಮಾತನಾಡಿ, ನಗರದ ಸೌಂದರ್ಯ ಹಾಗೂ ಶುಚಿತ್ವಕ್ಕಾಗಿ ನಾನಾ ಯೋಜನೆಗಳನ್ನು ಪೌರಕಾರ್ಮಿಕರ ನೇತೃತ್ವದಲ್ಲಿ ಯಶಸ್ವಿಗೊಳಿಸಲಾಗಿದೆ. ನಿತ್ಯ ಬೆಳಗ್ಗೆ 5 ಗಂಟೆಗೆ ಎದ್ದು ಪೌರಕಾರ್ಮಿಕರು ಕೆಲಸದಲ್ಲಿ ತೊಡಗಿಸಿಕೊಳ್ಳುವ ಮೂಲಕ ನಗರದಲ್ಲಿ ಶುಚಿತ್ವ ಕಾಪಾಡುತ್ತಾರೆ. ಇಡೀ ನಗರ ಸ್ವಚ್ಛವಾಗಿರಲು ನಿಮ್ಮೆಲ್ಲರ ಶ್ರಮವೇ ಕಾರಣ ಎಂದ ಅವರು, ಸ್ವಚ್ಛ ಹಾಗೂ ಸುಂದರ ನಗರದ ಹಿಂದೆ ಪೌರಕಾರ್ಮಿಕರ ಶ್ರಮ ಅಪಾರವಾಗಿದೆ ಎಂದು ಪೌರಕಾರ್ಮಿಕರ ಕಾರ್ಯವನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು. ಸ್ವಚ್ಛತೆ ಮತ್ತು ಆರೋಗ್ಯ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಇವುಗಳನ್ನು ಕಾಪಾಡುತ್ತಿರುವುದರ ಹಿಂದೆ ಪೌರಕಾರ್ಮಿಕರ ಶ್ರಮವಿದೆ.

ನಗರದಲ್ಲಿ ಸ್ವಚ್ಛತೆಯಿಲ್ಲದೇ ಇದ್ದರೆ ಸಾಕಷ್ಟು ರೋಗ ರುಜಿನ ಉಲ್ಬಣಗೊಳ್ಳುತ್ತವೆ. ಆದ-'ರೆ ಪೌರ ಕಾರ್ಮಿಕರು ಇಡೀ ನಗರದ ಇಂಚಿಂಚೂ ಜಾಗದಲ್ಲೆಲ್ಲ ಶುಚಿ ಮಾಡಿ, ನಗರದ ಸೌಂದರ್ಯ ಹೆಚ್ಚಳಕ್ಕೆ ಶ್ರಮಿಸುತ್ತಿದ್ದಾರೆ ಎಂದರು.

"ಪೌರಕಾರ್ಮಿಕರು ನಗರದ ಸ್ವಚ್ಛತೆಯ ಪ್ರಮುಖ ಆದ-ಾರಸ್ತಂಭಗಳಾಗಿದ್ದು, ಅವರ ನಿರಂತರ ಸೇವೆಯಿಂದ ನಗರದ ಸ್ವಚ್ಛತೆಯನ್ನು ಉತ್ತಮ ಮಟ್ಟದಲ್ಲಿ ಕಾಪಾಡಲು ಸಾಧ್ಯ ವಾಗಿದೆ. ಪೌರಕಾರ್ಮಿಕರ ಕಲ್ಯಾಣಕ್ಕಾಗಿ ಪಾಲಿಕೆಯ ವತಿಯಿಂದ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದ್ದು, 116 ಪೌರಕಾರ್ಮಿಕರಿಗೆ ಹಕ್ಕುಪತ್ರ ನೀಡಿ ವಾಸಕ್ಕೆ ಅನುಕೂಲ ಕಲ್ಪಿಸಲಾಗಿದೆ."



■ ವಿಜಯ ಮೆಕ್ಕಳಕಿ
ಮಹಾನಗರ ಪಾಲಿಕೆ ಆಯುಕ್ತರು

ನಗರವನ್ನು ಸದಾ ಸ್ವಚ್ಛವಾಗಿಡುವ ಪೌರಕಾರ್ಮಿಕರ ಕಲ್ಯಾಣಕ್ಕಾಗಿ ಪಾಲಿಕೆ ಹಾಗೂ ಸರ್ಕಾರದಿಂದ ವಿವಿಧ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಪೌರ ಕಾರ್ಮಿಕರಿಗೆ ನಿಯಮಿತವಾಗಿ ಆರೋಗ್ಯ ತಪಾಸಣೆ ಕಾರ್ಯಕ್ರಮವಿದೆ. ಪ್ರತಿ ಮೂರು ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದರು.

ಪಾಲಿಕೆ ಸದಸ್ಯರಾದ ಜವಾಹರ, ಸ್ವಪ್ನಾ ಕಣಮುಚನಾಳ, ರಾಜು ಮಗಿಮಠ, ಪ್ರೇಮಾನದ ಬಿರಾದಾರ ಹಾಗೂ ಸಫಾಯಿ ಕರ್ಮಚಾರಿ ಜಿಲ್ಲಾ ಸಮಿತಿ ಸದಸ್ಯ ಚೆನ್ನು ಕಟ್ಟಿಮನಿ ಮಾತನಾಡಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಉಪ ಮೇಯರ್ ಸುಮಿತ್ರಾ ಜಾಧವ, ಉಪ ಆಯುಕ್ತ ಮಹಾವೀರ ಬೋರಣ್ಣವರ, ಪಾಲಿಕೆ ಸದಸ್ಯರಾದ ರಾಹುಲ್ ಜಾಧವ, ಶರತ್ ಬಿರಾದಾರ, ಗಡಗಿ, ಅಸ್ಫಾಕ್ ಮನಗೂಳಿ, ಸಫಾಯಿ ಕರ್ಮಚಾರಿ ಸಮಿತಿಯ ಜಿಲ್ಲಾ ಸದಸ್ಯರಾದ ಮಹಾದೇವಿ ಹಾದಿಮನಿ, ದಯಾನಂದ ಸೇರಿದಂತೆ ಭೀಮರಾಯ ಜಿಗಜಿಣಗಿ, ರಾಜೇಶ್ವರಿ, ಮಂಗಳಾ ಶಹಾಪೂರ, ಕಟ್ಟಿಮನಿ, ಗಿರಿಧರ, ಯಲ್ಲಪ್ಪ ಛಲವಾದಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ಕೃತಿ ಬಿಡುಗಡೆ । ಸನ್ಮಾನ । ಬಹುಮಾನ & ಟ್ಯಾಬ್ ವಿತರಣೆ



ಕಾರ್ಯಕ್ರಮದಲ್ಲಿ ಮಹಾವೀರ ಬೋರಣ್ಣವರ ರಚಿಸಿರುವ 'ಕರುಳ ಬಳ್ಳಿಯ ಕಂಬನಿಯ ಕಥೆಗಳು' ಪುಸ್ತಕವನ್ನು ಡಾ. ಸರಸ್ವತಿ ಚಿಮ್ಮಲಗಿ ಬಿಡುಗಡೆಗೊಳಿಸಿದರು. 2026ನೇ ಸಾಲಿನಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಪೌರಕಾರ್ಮಿಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ವಿವಿಧ ಕ್ರೀಡಾಕೂಟಗಳಲ್ಲಿ ವಿಜೇತರಾದ ಪೌರಕಾರ್ಮಿಕ-ರಿಗೆ ಬಹುಮಾನ ಹಾಗೂ ವಿದ್ಯಾರ್ಥಿಗಳಿಗೆ ಟ್ಯಾಬ್ ವಿತರಣೆ ಮಾಡಲಾಯಿತು.

## ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿಕೆ

# ಮತ್ತೆ 4 ತಾಲೂಕುಗಳು ಬರಪೀಡಿತವೆಂದು ಘೋಷಣೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕೇಂದ್ರ ಬರ ನಿರ್ವಹಣೆ ಮಾನದಂಡಗಳನ್ನು ಅನುಸರಿಸಿ ಜಿಲ್ಲೆಯ ಆಲಮೇಲ, ದೇವರ ಹಿಪ್ಪರಗಿ, ಮುದ್ದೇಬಿಹಾಳ ಹಾಗೂ ಸಿಂದಗಿ ತಾಲೂಕುಗಳನ್ನು ತೀವ್ರ ಬರಪೀಡಿತ ತಾಲೂಕುಗಳೆಂದು ಘೋಷಣೆ ಮಾಡಲಾಗಿದೆ ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ತಿಳಿಸಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ನೀಡಿರುವ ಅವರು, ಈ ತಾಲೂಕುಗಳನ್ನು ಬರಪೀಡಿತ ಎಂದು ಘೋಷಣೆ ಮಾಡಲು ಅಗತ್ಯವಿರುವ ಕ್ರಮಗಳನ್ನು ತೀವ್ರಗತಿಯಲ್ಲಿ ಪೂರ್ಣಗೊಳಿಸಲು ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದೆ. ಅದರಂತೆ ನಾಲ್ಕು ತಾಲೂಕುಗಳ ಗ್ರೌಂಡ್ ಟ್ರೂಥಿಂಗ್ ಮತ್ತೀತರ ವೈಜ್ಞಾನಿಕ ಮಾನದಂಡಗಳ ಕಾರ್ಯವನ್ನು ಪೂರ್ಣಗೊಳಿಸಿ ಜಿಲ್ಲಾಡಳಿತ ಸರಕಾರಕ್ಕೆ ವರದಿ ನೀಡಿತ್ತು. ಅದರ ಆಧಾರದ ಮೇಲೆ ಈ ಅಧಿಸೂಚನೆ ಹೊರಡಿಸಲಾಗಿದೆ ಎಂದು ತಿಳಿಸಿದ್ದಾರೆ.



ಅಲ್ಲದೇ, ಇನ್ನುಳಿದ ತಾಳಿಕೋಟೆ ತಾಲೂಕಿನ ಗ್ರೌಂಡ್ ಟ್ರೂಥಿಂಗ್ ಕಾರ್ಯ ಪ್ರಗತಿಯಲ್ಲಿದೆ. ಎಲ್ಲ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಅದನ್ನು ಕೂಡ ಬರಪೀಡಿತ ತಾಲೂಕು ಎಂದು ಘೋಷಣೆ ಮಾಡಲಾಗುವುದು. ಈಗಾಗಲೇ ನಮ್ಮ ಜಿಲ್ಲೆಯಲ್ಲಿ ಮೊದಲ ಮತ್ತು ಎರಡನೇ ಪಟ್ಟಿಯಲ್ಲಿ ವಿಜಯಪುರ, ಕೊಲ್ಹಾರ, ನಿಡಗುಂದಿ, ಬಸವನ ಬಾಗೇವಾಡಿ, ಬಬಲೇಶ್ವರ, ತಿಕೋಟಾ ತಾಲೂಕುಗಳನ್ನು ತೀವ್ರ ಬರಪೀಡಿತ ತಾಲೂಕುಗಳೆಂದು ಸರಕಾರ ಘೋಷಣೆ ಮಾಡಿದೆ. ಈಗ ಮೂರನೇ ಹಂತದಲ್ಲಿ ಆಲಮೇಲ, ದೇವರ ಹಿಪ್ಪರಗಿ ಹಾಗೂ ಸಿಂದಗಿ ತಾಲೂಕುಗಳನ್ನು ತೀವ್ರ ಬರಪೀಡಿತ ತಾಲೂಕುಗಳೆಂದು ರಾಜ್ಯ ಸರಕಾರ ಘೋಷಣೆ ಮಾಡಿದೆ ಎಂದು ಸಚಿವ ಎಂ. ಬಿ. ಪಾಟೀಲ ಅವರು ತಿಳಿಸಿದ್ದಾರೆ.

# ಮಹಿಳೆ ಮಗು ಕಾಣೆ :ಪತ್ತೆಗೆ ಮನವಿ

■ ಉದಯರಶ್ಮಿ ದಿನಪತ್ರಿಕೆ


ವಿಜಯಪುರ: ಮಹಿಳೆ ಹಾಗೂ ಮಗು ಕಾಣೆಯಾಗಿರುವ ಕು-ರಿತು ವಿಜಯಪುರ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಾಣೆಯಾದವರ ಪತ್ತೆಗೆ ರೈಲ್ವೆ ಪೊಲೀಸ್ ಠಾಣಾಧಿಕಾ ರಿಗಳು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡಿದ್ದಾರೆ. ಈ ಕು-ರಿತು ಯಾವುದೇ ಮಾಹಿತಿ ದೊರೆತಲ್ಲಿ, ವಿಜಯಪುರ ರೈಲ್ವೆ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ 08352–250883 ಅಥವಾ ರೈಲ್ವೆ ಪೊಲೀಸ್ ಕಂಟ್ರೋಲ್ ರೂಂ 080–22871291ಕ್ಕೆ ಮಾಹಿತಿ ನೀಡುವಂತೆ ವಿಜಯಪುರ ರೈಲ್ವೆ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





# ಸಿಎ ಸೈಟ್‌ಗಳು ಸಾರ್ವನಿಕರ ಬಳಕೆಗೆ ಮೀಸಲಿಡಲು ಆಗ್ರಹ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಬಸವನಬಾಗೇವಾಡಿ ಪಟ್ಟಣದ ವಜ್ರ ಹನುಮಾನ ನಗರ, ಕೇಶವ ನಗರ ಹಾಗೂ ರಾಧಾಕೃಷ್ಣ ನಗರಗಳಕೇಂದ್ರಬಿಂದುವಾಗಿರುವರಾಘವೇಂದ್ರಕುಲಕರ್ಣಿ ಲೇಔಟ್‌ನಲ್ಲಿನ ಸಿಎ ಸೈಟ್‌ಗಳನ್ನು ಒಂದು ಧರ್ಮಕ್ಕೆ ಸೀಮಿತಗೊಳಿಸುವ ಕ್ರಮವನ್ನು ಖಂಡಿಸಿ, ಅವುಗಳನ್ನು ಎಲ್ಲಾ ಸಾರ್ವಜನಿಕರ ಬಳಕೆಗೆ ಮೀಸಲಿಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಪದಾಧಿಕಾರಿಗಳು ವಿಜಯಪುರ ಜಿಲ್ಲಾಧಿಕಾರಿ ಕಚೇರಿ ಮುಖ್ಯ ಅಧಿಕಾರಿ ಪವಾರ ಅವರಿಗೆ ಮನವಿ ಸಲ್ಲಿಸಿದರು.

ಮನವಿಯಲ್ಲಿ ಸಿ.ಎ. ಸೈಟ್ ನಂಬರ:1878 ಕ/156 ಚೇರ್ಮನ್ ಗುರ್ಜಿ ಕಟ ಮುಸ್ಲಿಂ ಜಮಾತ ಬಸವನಬಾಗೇವಾಡಿ ಇವರಿಗೆ ಲೀಸ್ ಮೇಲೆ ಕೊಡಲು ಆಕ್ಷೇಪಣೆ ಇರುತ್ತದೆ. ಸಂಬಂಧಪಟ್ಟ ಅಧಿಕಾರಿಗಳಿಗೆ 30 ದಿನಗಳ ಕಾಲಾವಕಾಶ ನೀಡಲಾಗಿದ್ದು, ಬೇಡಿಕೆ ಈಡೇರದಿದ್ದರೆ ಮೂರು ನಗರಗಳ ಸಾರ್ವಜನಿಕರು ಹಾಗೂ ಕರ್ನಾಟಕ ರಕ್ಷಣಾ ವೇದಿಕೆ ಸೇರಿದಂತೆ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಬೃಹತ್ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು, ಸಿಎ ಸೈಟ್‌ಗಳ ಮಾಲೀಕರು ಹಾಗೂ ಸ್ಥಳೀಯ ಹಿರಿಯರು, ಅಶೋಕ ಹಾರಿವಾಳ, ಶಿವನಗೌಡ ಬಿರಾದಾರ, ರಾಘವೇಂದ್ರ ಕುಲಕರ್ಣಿ, ಮಲ್ಲು ಪಟ್ಟಣಶೆಟ್ಟಿ, ರಾಘು ಬಾವಿಕಟ್ಟಿ, ಈರಣ್ಣ ಪತ್ತಾರ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

## ಬರ ಘೋಷಣೆ, ಕೆರೆ ಭರ್ತಿ, ಏತ ನೀರಾವರಿ ಸರಿಪಡಿಸಿ । ಚಡಚಣ ರೈತರ ಪಟ್ಟು । ಅಧಿಕಾರಿಗಳು ಬರುವವರೆಗೂ ಕದಲಲ್ಲ । ತಡರಾತ್ರಿವರೆಗೂ ಚಡಚಣ ರೈತರ ಧರಣಿ

# ಚಡಚಣ ತಾಲೂಕು ಬರಗಾಲ ಘೋಷಣೆಗಾಗಿ ಬೃಹತ್ ಪ್ರತಿಭಟನೆ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ತಾಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಬೇಕು, ತಾಲೂಕಿನ ಎಲ್ಲ ಕೆರೆಗಳನ್ನು ತುಂಬಿಸಬೇಕು, ಚಡಚಣ ಬೋರಿ ಹಳ್ಳಕ್ಕೆ ನೀರು ಹರಿಸಬೇಕು, ಏತ ನೀರಾವರಿ ವ್ಯವಸ್ಥೆ ಸಮರ್ಪಕಗೊಳಿಸಬೇಕು ಹಾಗೂ ರೈತರಿಗೆ ಸಮರ್ಪಕ ವಿದ್ಯುತ್ ಪೂರೈಸಬೇಕು ಎಂದು ಆಗ್ರಹಿಸಿ ಭಾರತೀಯ ಕಿಸಾನ್ ಸಂಘ, ರೈತೋದಯ ಸಂಘ, ಹಸಿರು ಸೇನೆ ಸೇರಿದಂತೆ ವಿವಿಧ ರೈತಪರ ಸಂಘಟನೆಗಳ ನೇತೃತ್ವದಲ್ಲಿ ಮಂಗಳವಾರ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಚಡಚಣ ಪ್ರವಾಸಿ ಮಂದಿರದಿಂದ ಪ್ರತಿಭಟನೆ ಮಾಡುತ್ತ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಶಿರಾಡೋಣಲಿಂಗಸಗೂರು ರಾಜ್ಯ ಹೆದ್ದಾರಿಯನ್ನು ಕೆಲಕಾಲ ಸಾಂಕೇತಿಕವಾಗಿ ತಡೆದು ಪ್ರತಿಭಟನೆ ನಡೆಸಿದ ರೈತರು, ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಪ್ರತಿಭಟನಾ ಮೆರವಣಿಗೆಯ ಮೂಲಕ ತಹಶೀಲ್ದಾರ್ ಕಚೇರಿಗೆ ತೆರಳಿ ತಹಶೀಲ್ದಾರ್ ಸಂಜಯ ಇಂಗಳೆ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಹಸಿರು ಸೇನೆ ತಾಲೂಕಾಧ್ಯಕ್ಷ ವಸಂತ ಭೈರಾಮಡಿ ಮಾತನಾಡಿ, ಈಗಾಗಲೇ ಬರಗಾಲ ಪೀಡಿತ ತಾಲೂಕುಗಳ ಪಟ್ಟಿಯಲ್ಲಿ 117 ತಾಲೂಕುಗಳನ್ನು ಸೇರ್ಪಡೆ ಮಾಡಲಾಗಿದ್ದು, ಚಡಚಣ ತಾಲೂಕನ್ನು ಕೂಡಲೆ ಬರಗಾಲ ಪೀಡಿತ ತಾಲೂಕಾಗಿ ಘೋಷಿಸಬೇಕು ಎಂದು ಆಗ್ರಹಿಸಿದರು.

ತಾಲೂಕಿನ ಏತ ನೀರಾವರಿ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು, ಸುಮಾರು 461 ಕೋಟಿ ಕಾಮಗಾರಿಯ ದುಡ್ಡು ಕಾಂಟ್ರ್ಯಾಕ್ಟರ್ ಹಾಗೂ ಅಧಿಕಾರಿಗಳು ಕೂಡಿ ಅರ್ಧಮರ್ಧ ಕೆಲಸ ಮಾಡಿ ಹಣ ಲಪಟಾಯಿಸಿದ್ದಾರೆ ಅದರ ಸಂಪೂರ್ಣ ತನಿಖೆ ಮಾಡಿ ತಪ್ಪಿತಸ್ಥ ಅಧಿಕಾರಿ ಹಾಗೂ ಕಾಂಟ್ರ್ಯಾಕ್ಟರ್ ಗೆ ಶಿಕ್ಷೆ ವಿಧಿಸಬೇಕು ಮತ್ತು ಕಾಮಗಾರಿಯನ್ನು ತುರ್ತಾಗಿ ಸರಿಪಡಿಸಿ ರೈತರ ಜಮೀನುಗಳಿಗೆ ಸಮರ್ಪಕವಾಗಿ ನೀರು ತಲುಪುವಂತೆ ಮಾಡಬೇಕು. ತಾಲೂಕಿನ ಎಲ್ಲ ಕೆರೆಗಳನ್ನು ತುಂಬಿಸುವ ಮೂಲಕ ಜಾನುವಾರು ಹಾಗೂ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಹಸಿರು ಸೇನೆ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಹಾಗೂ ರೈತ ಮುಖಂಡ ಮಹಾದೇವ ಬನಸೋಡೆ ಮಾತನಾಡಿ, ತಾಲೂಕಿನ ಕೆಲ ಕಾಲುವೆಗಳಿಗೆ ಮಾತ್ರ ನೀರು ಹರಿಸಲಾಗುತ್ತಿದ್ದು, ಕೊನೆಯ ಭಾಗದ ರೈತ-ರಿಗೆ ನೀರು ತಲುಪುತ್ತಿಲ್ಲ. ತಾಲೂಕಿನ ಕಟ್ಟಕಡೆಯ ಜಮೀನಿನವರೆಗೂ ನೀರು ಹರಿಸಬೇಕು. ಇಲ್ಲದಿದ್ದರೆ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹ ಮುಂದುವ-ರಿಸಲಾಗುವುದು ಎಂದು ಎಚ್ಚರಿಸಿದರು.

ತಾಲೂಕಿನಲ್ಲಿ ವಿದ್ಯುತ್ ಪೂರೈಕೆಯೂ ಸಮರ್ಪಕವಾಗಿಲ್ಲ. ಕೆಲ ದಿನಗಳಲ್ಲಿ ನಾಲ್ಕು ಗಂಟೆ, ಕೆಲವೊಮ್ಮೆ ಐದುಆರು ಗಂಟೆ ಮಾತ್ರ ವಿದ್ಯುತ್ ನೀಡಲಾಗುತ್ತಿದ್ದು, ಸಮಯದ ನಿಗದಿತ ವೇಳಾಪಟ್ಟಿಯಿಲ್ಲದೆ ರೈತರು ಸಂಕಷ್ಟ ಅನುಭವಿಸುವಂತಾಗಿದೆ. ನಸುಕಿನ ವೇಳೆಯಲ್ಲಿ ವಿದ್ಯುತ್ ನೀಡುವುದರಿಂದ ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗುತ್ತಿದೆ ಎಂದು ದೂರಿದರು.

ಚಡಚಣ ತಾಲೂಕು ಮೊದಲಿನಿಂದಲೂ ಮಳೆ ಆಶ್ರಿತ ಪ್ರದೇಶವಾಗಿದ್ದು, ಜೂನ್‌ನಿಂದ ಸಮರ್ಪಕ ಮಳೆಯಾಗದೆ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈಗಾಗಲೇ ಬಿತ್ತನೆ ಮಾಡಿರುವ ಬೆಳೆಗಳು ಕೈಗೆ ಬರುವ ಲಕ್ಷಣ ಕಾಣುತ್ತಿಲ್ಲ. ಹೀಗಾಗಿ ಕೂಡಲೇ ತಾಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿ ರೈತ-ರಿಗೆ ಅಗತ್ಯ ಪರಿಹಾರ ಹಾಗೂ ನೆರವು ಒದಗಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರೈತೋದಯ ಸಂಘದ ಜಿಲ್ಲಾ ಉಪಾಧ್ಯಕ್ಷ ನಾಗನಾಥಗೌಡ ಬಿರಾದಾರ, ಕರವೇ ವಲಯಾಧ್ಯಕ್ಷ ಸೋಮಶೇಖರ ಕಂಬಾರ, ಭೀಮ ಸೇನೆ ತಾಲೂಕಾಧ್ಯಕ್ಷ ರುದ್ರೇಶ ಬನಸೋಡೆ, ಕೆಆರ್‌ಎಸ್ ಪಕ್ಷದ ಸೈನಿಕರಾದ ಶಿವಾನಂದ ಯಡಳ್ಳಿ, ಶಕ್ತಿಕುಮಾರ, ಸ್ಥಳೀಯ ವಿರಕ್ತ ಮಠದ ಷಡಕ್ಷರಿ ಮಹಾಸ್ವಾಮಿಗಳು,ಮಹಾದೇವ ಕರ್ಲಮಳ, ಮಹಾದೇವ ಹಿರೇಕುರುಬರ, ರೈತ ಮುಖಂಡರಾದ ಸಂತೋಷ ಭೈರಗೊಂಡ, ಫೇನಪ್ಪ ಬಿರಾದಾರ, ಉತ್ತಮ ಕಾರಬಾರಿ, ಹಣಮಂತ ಪೀರಗೊಂಡ, ಅಜೀತ ವಾಲಿ, ರಮೇಶ ಬಬಲಾದಿ, ಆಕಾಶ ಪಾಟೀಲ ಸೇರಿದಂತೆ ನೂರಾರು ರೈತರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಪಾಲ್ಗೊಂಡಿದ್ದರು.

### ಅಧಿಕಾರಿಗಳಿಗಾಗಿ ತಡರಾತ್ರಿವರೆಗೂ ಕಾದ ರೈತರು



ಪ್ರತಿಭಟನೆ ವೇಳೆ ಸಂಬಂಧಿಸಿದ ಅಧಿಕಾರಿಗಳು ಸ್ಥಳಕ್ಕೆ ಆಗಮಿಸದ ಹಿನ್ನೆಲೆಯಲ್ಲಿ ರೈತರು ಆಕ್ರೋಶ ವ್ಯಕ್ತಪಡಿಸಿದರು. ಅಧಿಕಾರಿಗಳು ಬರುವವರೆಗೆ ತಹಶೀಲ್ದಾರ್ ಕಚೇರಿಯಿಂದ ತೆರಳುವುದಿಲ್ಲ ಎಂದು ಪಟ್ಟು ಹಿಡಿದು, ಕಚೇರಿ ಆವರಣದಲ್ಲೇ ಧರಣಿ ಮುಂದುವರಿಸಿದರು. ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತ ತಡರಾತ್ರಿ 10 ಗಂಟೆಯವರೆಗೂ ಅಧಿಕಾರಿಗಳಿಗಾಗಿ ಕಾದು ಪ್ರತಿಭಟನೆ ಮುಂದುವರೆಸಿದರು.

# ನಿನ್ನ ಹಣೆಬರಹದ ಶಿಲ್ಪಿ ನೀನೇ!





ಜಯಶ್ರೀ.ಜೆ. ಅಬ್ಬಿಗೇರಿ.
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ ಮೊ:9449234142

■ ಉದಯರಶ್ಮಿ ದಿನಪತ್ರಿಕೆ

ನಾನೀಗ ಹೇಳ ಹೊರಟಿರುವುದು ಇಂಗ್ಲಿಷ್ ಸಾಹಿತ್ಯದ ಪ್ರಸಿದ್ಧ ಲೇಖಕ ಲೂಯಿಸ್ ಕ್ಯಾರೊಲ್ ಅವರ 'ಆಲಿಸ್ ಇನ್ ವಂಡರ್‌ಲ್ಯಾಂಡ್' ಕಥೆಯ ಒಂದು ಸುಂದರ ಪ್ರಸಂಗ. ಆಲಿಸ್ ಒಂದು ಕವಲು ದಾರಿಯಲ್ಲಿ ನಿಂತು ಗೊಂದಲಕ್ಕೊಳಗಾಗುತ್ತಾಳೆ. ಅಲ್ಲಿರುವ ಬೆಕ್ಕನ್ನು ಅವಳು, "ನಾನು ಇಲ್ಲಿಂದ ಯಾವ ದಾರಿಯಲ್ಲಿ ಹೋಗಬೇಕು?" ಎಂದು ಕೇಳುತ್ತಾಳೆ. ಅದಕ್ಕೆ ಬೆಕ್ಕು, "ಅದು ನೀನು ಎಲ್ಲಿಗೆ ತಲುಪಬೇಕೆಂದುಕೊಂಡಿದ್ದೀಯಾ ಎಂಬುದರ ಮೇಲೆ ನಿರ್ಧಾರವಾಗುತ್ತದೆ" ಎನ್ನುತ್ತದೆ. ಆಲಿಸ್, "ನನಗೆ ಎಲ್ಲಿಗೆ ಹೋಗಬೇಕೆಂದು ನಿಖರವಾಗಿ ಗೊತ್ತಿಲ್ಲ" ಎಂದಾಗ, ಬೆಕ್ಕು ಮುಗುಳ್ನಕ್ಕು, "ಹಾಗಾದರೆ ನೀನು ಯಾವ ದಾರಿಯಲ್ಲಿ ಹೋದರೂ ತೊಂದರೆಯಿಲ್ಲ, ಎಲ್ಲ ದಾರಿಯೂ ಒಂದೇ" ಎನ್ನುತ್ತದೆ.

ಈ ಸಣ್ಣ ಕಥೆ ನಮ್ಮ ಬದುಕಿಗೆ ದೊಡ್ಡ ಪಾಠವನ್ನು ಕಲಿಸುತ್ತದೆ. ಬದುಕಿನಲ್ಲಿ ಸ್ಪಷ್ಟವಾದ ಗುರಿ ಇಲ್ಲದಿದ್ದರೆ ನಾವು ಪರಿಸ್ಥಿತಿಗಳ ಕೈಗೊಂಬೆಯಾಗುತ್ತೇವೆ. ಹರಿಯುವ ನೀರು ಹೇಗೆ ಕಲ್ಲು–ಬಂಡೆಗಳನ್ನು ಸೀಳಿ ತನ್ನದೇ ಆದ ಹಾದಿಯನ್ನು ಸೃಷ್ಟಿಸಿಕೊಳ್ಳುತ್ತದೆಯೋ, ಹಾಗೆಯೇ ನಮ್ಮ ಬದುಕಿನ ಹಾದಿಯನ್ನು ಬೇರೆಯವರು ನಿರ್ಧರಿಸಲು ಬಿಡದೆ, ನಾವೇ ರೂಪಿಸಿಕೊಳ್ಳಬೇಕು.



**ನುಡಿಮುತ್ತುಗಳು**

ಬದುಕಿನಲ್ಲಿ ನೆಪಗಳನ್ನು ಬದಿಗೊತ್ತಿ ಮುನ್ನಡೆಯುವುದು ಹೇಗೆ ಎಂಬುದನ್ನು ಪಾಶ್ಚಾತ್ಯ ಸಾಧಕರು ಮತ್ತು ಜಗತ್ತಿನ ಶ್ರೇಷ್ಠ ನುಡಿಮುತ್ತುಗಳು ನಮಗೆ ಸುಂದರವಾಗಿ ಮನವರಿಕೆ ಮಾಡಿಕೊಡುತ್ತವೆ.

ಹೆನ್ರಿ ಫೋರ್ಡ್ ಅವರು ಹೇಳುವಂತೆ,



"ನೀನು ಸಾಧಿಸಬಲ್ಲೆ ಎಂದು ನಂಬಿದರೂ ಅಥವಾ ಸಾಧಿಸಲಾರೆ ಎಂದು ನಂಬಿದರೂ, ಎರಡೂ ಕಲ್ಪನೆಗಳಲ್ಲೂ ನೀನು ಸರಿಯಾಗಿಯೇ ಇರುತ್ತೀಯಾ." ಅಂದರೆ ನಮ್ಮ ಯೋಚನೆಗಳೇ ನಮ್ಮ ಹಣೆಬರಹ. ಬದುಕಿನ ಪಯಣದಲ್ಲಿ ಸವಾಲುಗಳು ಎದುರಾದಾಗ ಕುಗ್ಗಬಾರದು, ಏಕೆಂದರೆ "ನಿಶ್ಯಬ್ದ ಸಮುದ್ರವು ಎಂದಿಗೂ ಒಬ್ಬ ನಾವಿಕನನ್ನು ನುರಿತ ಕುಶಲಿಯನ್ನಾಗಿ ಮಾಡಲಾರದು" ಎಂಬ ನಾಣ್ಣುಡಿಯಿದೆ. ಕಷ್ಟಗಳೇ ನಮ್ಮನ್ನು ಗಟ್ಟಿಗೊಳಿಸುತ್ತವೆ.ವಿಶ್ವವಿಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್ಸ್ಟೈನ್ ಅವರ ಪ್ರಕಾರ, "ಕಷ್ಟಗಳ ಮಧ್ಯದಲ್ಲಿಯೇ ಸುವರ್ಣ ಅವಕಾಶಗಳು ಅಡಗಿರುತ್ತವೆ." ಪರಿಸ್ಥಿತಿಗಳು ಎಷ್ಟೇ ಕಠಿಣವಾಗಿದ್ದರೂ ಸಬೂಬುಗಳನ್ನು ಹುಡುಕುವುದನ್ನು ನಿಲ್ಲಿಸಬೇಕು. ಅದಕ್ಕೇ "ದೂರು ಹೇಳುವವನು ಗಾಳಿಯನ್ನು ದೂಷಿಸುತ್ತಾನೆ, ಆಶಾವಾದಿಯು ಅದು ಬದಲಾಗಲಿ ಎಂದು ಕಾಯುತ್ತಾನೆ, ಆದರೆ ವಾಸ್ತವವಾದಿಯು ತನ್ನ ದೋಣಿಯ ಪಟಗಳನ್ನು ಸರಿಹೊಂದಿಸಿ ಮುನ್ನಡೆಯುತ್ತಾನೆ" ಎನ್ನುತ್ತಾರೆ. ನಾವೂ ಸಹ ಪರಿಸ್ಥಿತಿಗೆ ತಕ್ಕಂತೆ ನಮ್ಮ ಪ್ರಯತ್ನಗಳನ್ನು ಬದಲಾಯಿಸಿಕೊಳ್ಳಬೇಕು.

ನಮ್ಮ ಹಣೆಬರಹವನ್ನು ನಾವೇ ಬರೆಯಬೇಕಾದರೆ ಬೇಕಾಗುವ ಕೆಲ ಸರಳ ಸಲಹೆಗಳು ಇಲ್ಲಿವೆ.

ಸ್ವಯಂ ಜವಾಬ್ದಾರಿ ವಹಿಸಿಕೊಳ್ಳಿ (Take Absolute Responsibility)

ನಿಮ್ಮ ಜೀವನದಲ್ಲಿ ಸಂಭವಿಸುವ ಪ್ರತಿಯೊಂದು ಘಟನೆಗೂ ನೀವೇ ಸಂಪೂರ್ಣ ಜವಾಬ್ದಾರರು. ಸೋಲು ಅಥವಾ ಕಷ್ಟಗಳು ಎದುರಾದಾಗ ಪರಿಸ್ಥಿತಿಯನ್ನಾಗಲಿ, ಇತರರನ್ನಾಗಲಿ ದೂಷಿಸುವುದನ್ನು ನಿಲ್ಲಿಸಿ. ನಿಮ್ಮ ತಪ್ಪುಗಳನ್ನು ಒಪ್ಪಿಕೊಂಡು, ಅವುಗಳಿಂದ ಪಾಠ ಕಲಿಯುವುದೇ ನಿಜವಾದ ಪ್ರಬುದ್ಧತೆ. ಯಾವಾಗ ನೀವು ಜವಾಬ್ದಾರಿಯನ್ನು ತೆಗೆದುಕೊಳ್ಳಲು ಆರಂಭಿಸುತ್ತೀರೋ, ಆ ಕ್ಷಣದಿಂದಲೇ ನಿಮ್ಮ ಹಣೆಬರಹವನ್ನು ನೀವೇ ಬರೆಯುವ ಶಕ್ತಿ ನಿಮಗೆ ದೊರೆಯುತ್ತದೆ. ಸ್ವಾವಲಂಬನೆ ಮತ್ತು ಆಂತರಿಕ ಶಕ್ತಿಯನ್ನು ಜಾಗೃತಗೊಳಿಸಲು ಇದು ಮೊದಲ ಹೆಜ್ಜೆಯಾಗಿದೆ. ವಿನ್‌ಸ್ಟನ್ ಚರ್ಚಿಲ್ ಅವರು, "ಯಶಸ್ಸು ಎನ್ನುವುದು ಅಂತಿಮವಲ್ಲ, ಸೋಲು ಎನ್ನುವುದು ಅಂತ್ಯವಲ್ಲ; ಮುಂದುವರಿಯುವ ಧೈರ್ಯವೊಂದೇ ನಿಜವಾಗಿ ಮುಖ್ಯವಾಗುತ್ತದೆ" ಎಂದಿದ್ದಾರೆ. ಸೋಲಿಗೆ ಹೆದರಬೇಡಿ ಸ್ವಯಂ ಜವಾಬ್ದಾರಿ ವಹಿಸಿಕೊಳ್ಳಿ.


ನೆಪಗಳನ್ನು ಸೃಷ್ಟಿಸುವುದನ್ನು ನಿಲ್ಲಿಸಿ (Stop Making Excuses)

"ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತು" ಎಂಬಂತೆ, ಯೌವನದಲ್ಲೇ ಶಿಸ್ತನ್ನು ರೂಢಿಸಿಕೊಳ್ಳಬೇಕು ನೆಪ ಹೇಳುವುದನ್ನು ನಿಲ್ಲಿಸಬೇಕು. "ನನ್ನ ಬಳಿ ಹಣವಿಲ್ಲ, ಸಮಯವಿಲ್ಲ, ಸೂಕ್ತ ಪ್ರೋತ್ಸಾಹವಿಲ್ಲ" ಎನ್ನುವ ನೆಪಗಳು ನಿಮ್ಮ ಪ್ರಗತಿಯನ್ನು ಕುಂಠಿತಗೊಳಿಸುತ್ತವೆ. ನೆಪಗಳು ಸೋಲುವವರ ಆಯುಧಗಳಷ್ಟೇ. ಯಶಸ್ಸು ಸಾಧಿಸಿದ ಪ್ರತಿಯೊಬ್ಬ ವ್ಯಕ್ತಿಯೂ ಹತ್ತಾರು ಕಷ್ಟಗಳನ್ನು ದಾಟಿಯೇ ಬಂದಿರುತ್ತಾರೆ. ಸಬೂಬುಗಳನ್ನು



ಹುಡುಕುವ ಬದಲು ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಹೇಗೆ ಮುನ್ನಡೆಯಬಹುದು ಎಂದು ಯೋಚಿಸಿ. ನಿಮ್ಮ ಆಲೋಚನಾ ಶಕ್ತಿಯನ್ನು ಸಮಸ್ಯೆಯ ಮೇಲಲ್ಲ, ಪರಿಹಾರದ ಮೇಲೆ ಕೇಂದ್ರೀಕರಿಸಿ. ನೆಪಗಳನ್ನು ಬದಿಗಿಟ್ಟಾಗ ಮಾತ್ರ ಹೊಸ ಸಾಧ್ಯತೆಗಳು ಗೋಚರಿಸುತ್ತವೆ.

ಹರಿಯುವ ನೀರಿನಂತೆ ಸದಾ ಕ್ರಿಯಾಶೀಲರಾಗಿರಿ



(Be Fluid and Adaptable)

ಹರಿಯುವ ನೀರು ಕಲ್ಲಿನ ತಡೆ ಎದುರಾದಾಗ ನಿಲ್ಲುವುದಿಲ್ಲ; ಅದು ಪಕ್ಕದಿಂದ ಅಥವಾ ಮೇಲಿನಿಂದ ದಾರಿಯನ್ನು ಮಾಡಿಕೊಂಡು ಸಾಗುತ್ತದೆ. ಬದುಕಿನ ಸವಾಲುಗಳು ಎದುರಾದಾಗ ನೀವೂ ಸಹ ಅಷ್ಟೇ ಹೊಂದಿಕೊಳ್ಳುವ ಸ್ವಭಾವವನ್ನು (Adaptability) ರೂಢಿಸಿಕೊಳ್ಳಬೇಕು. ಹಳೆಯ ಪದ್ಧತಿಗಳು ಅಥವಾ ಯೋಜನೆಗಳು ವಿಫಲವಾದರೆ, ಹೊಸ ದಾರಿಗಳನ್ನು ಹುಡುಕಿ. ಪರಿಸ್ಥಿತಿಗೆ ತಕ್ಕಂತೆ ನಿಮ್ಮ ಜ್ಞಾನ ಮತ್ತು ಕೌಶಲ್ಯಗಳನ್ನು ನವೀಕರಿಸಿಕೊಳ್ಳುತ್ತಾ ಸಾಗಿದರೆ, ಯಾವುದೇ ಅಡೆತಡೆಗಳು ನಿಮ್ಮನ್ನು ತಡೆಯಲು ಸಾಧ್ಯವಿಲ್ಲ. ಮುನ್ನಡೆಯುವುದೇ ಜೀವನದ ಧರ್ಮ.

ಸ್ಪಷ್ಟವಾದ ಮತ್ತು ಉನ್ನತವಾದ ಗುರಿಯನ್ನು ಹೊಂದಿರಿ (Set Clear, High Goals)

ಬದುಕಿನಲ್ಲಿ ಸ್ಪಷ್ಟವಾದ ದಿಕ್ಸೂಚಿ ಇಲ್ಲದಿದ್ದರೆ ಗಾಳಿಗೆ ಸಿಕ್ಕ ಹಡಗಿನಂತಾಗುತ್ತೇವೆ. ನಿಮ್ಮ ಆಸೆಗಳು ಮತ್ತು ಕನಸುಗಳನ್ನು ಸ್ಪಷ್ಟವಾದ ಗುರಿಗಳಾಗಿ ಪರಿವರ್ತಿಸಿ. ಆ ಗುರಿಯನ್ನು ತಲುಪಲು ದಿನನಿತ್ಯದ ಸಣ್ಣ ಸಣ್ಣ ಯೋಜನೆಗಳನ್ನು ರೂಪಿಸಿ. ಉನ್ನತವಾದ ಗುರಿಗಳು ನಿಮ್ಮಲ್ಲಿ ನಿರಂತರ ಉತ್ಸಾಹ ಮತ್ತು ಶಕ್ತಿಯನ್ನು ತುಂಬುತ್ತವೆ. ಗುರಿ ಸ್ಪಷ್ಟವಾಗಿದ್ದಾಗ ಎಂತಹ ಕಠಿಣ ಪರಿಸ್ಥಿತಿಯಲ್ಲೂ ನಿಮ್ಮ ಗಮನ ಬೇರೆಡೆಗೆ ಹರಿಯುವುದಿಲ್ಲ ಮತ್ತು ನಿಮ್ಮ ಹಾದಿಯನ್ನು ನೀವೇ ಆತ್ಮವಿಶ್ವಾಸದಿಂದ ನಿರ್ಮಿಸಿಕೊಳ್ಳಲು ಸಾಧ್ಯವಾಗುತ್ತದೆ.

ದೃಢವಾದ ಆತ್ಮವಿಶ್ವಾಸ ಮತ್ತು ತಾಳ್ಮೆ ಬೆಳೆಸಿಕೊಳ್ಳಿ (Build Unshakable Self-Belief)

ಜಗತ್ತೇ ನಿಮ್ಮನ್ನು ಸಂಶಯಿಸಿದರೂ, ನೀವು ನಿಮ್ಮನ್ನು ನಂಬಬೇಕು. ಆತ್ಮವಿಶ್ವಾಸದೇ ಯಶಸ್ಸಿನ ಮೂಲ ಪ್ರೇರಕ ಶಕ್ತಿ. ನದಿ ಸಾಗರವನ್ನು ಸೇರಲು ಸಾವಿರಾರು ಮೈಲಿಗಳನ್ನು ಕ್ರಮಿಸಬೇಕಾಗುತ್ತದೆ ಮತ್ತು ಅದಕ್ಕೆ ಅಪಾರ ತಾಳ್ಮೆ ಬೇಕು. ಹಾಗೆಯೇ, ನಿಮ್ಮ ಶ್ರಮದ ಫಲ ತಕ್ಷಣವೇ ಸಿಗದಿದ್ದರೂ ನಿರಾಶರಾಗಬೇಡಿ. ಸತತ ಪ್ರಯತ್ನ ಮತ್ತು ಧೃಡ ನಿರ್ಧಾರಗಳು ಕಾಲಕ್ರಮೇಣ ದೊಡ್ಡ ಬದಲಾವಣೆಯನ್ನು ತರುತ್ತವೆ. ನಿಮ್ಮ ಸಾಮರ್ಥ್ಯದ ಮೇಲೆ ನಿಮಗಿರುವ ನಂಬಿಕೆಯೇ ನಿಮ್ಮ ಭವಿಷ್ಯದ ರೇಖೆಗಳನ್ನು ಬದಲಾಯಿಸುತ್ತದೆ.

ನಿರಂತರ ಕಲಿಕೆಗೆ ಒಗ್ಗಿಕೊಳ್ಳಿ (Embrace Continuous Learning)

ಜ್ಞಾನವು ನಿಮ್ಮನ್ನು ಸಶಕ್ತಗೊಳಿಸುತ್ತದೆ. ಬದುಕಿನ ಪ್ರತಿಯೊಂದು ಹಂತದಲ್ಲೂ ಹೊಸ ವಿಷಯಗಳನ್ನು ಕಲಿಯಲು ಮುಕ್ತವಾಗಿರಿ. ಪುಸ್ತಕಗಳನ್ನು ಓದುವುದು, ಸಾಧಕರ ಅನುಭವಗಳನ್ನು ಆಲಿಸುವುದು ಮತ್ತು ನಿಮ್ಮ ತಪ್ಪುಗಳಿಂದ ಕಲಿಯುವುದು ನಿಮ್ಮ ವ್ಯಕ್ತಿತ್ವವನ್ನು ಹಸನುಗೊಳಿಸುತ್ತದೆ. ಜ್ಞಾನವಂತ ವ್ಯಕ್ತಿಯು ಯಾವುದೇ ಪರಿಸ್ಥಿತಿಯಲ್ಲೂ ಧೃತಿಗೆಡುವುದಿಲ್ಲ; ಬದಲಿಗೆ ಆ ಪರಿಸ್ಥಿತಿಯನ್ನು ತನಗೆ ಪೂರಕವಾಗಿ ಬಳಸಿಕೊಳ್ಳುತ್ತಾನೆ. ಕಲಿಕೆ ನಿಂತಾಗ ಬೆಳವಣಿಗೆ ನಿಲ್ಲುತ್ತದೆ, ಆದ್ದರಿಂದ ಸದಾ ವಿದ್ಯಾರ್ಥಿಯಾಗಿ ಬದುಕನ್ನು ಎದುರಿಸಿ.

**ಸುಂದರ ಸಂದೇಶ**

ಬದುಕು ನಮಗೆ ಸಿಕ್ಕ ಅಮೂಲ್ಯವಾದ ಉಡುಗೊರೆ. ಅದನ್ನು ಪರಿಸ್ಥಿತಿಗಳ ನೆಪ ಒಡ್ಡಿ ವ್ಯರ್ಥ ಮಾಡಬಾರದು. ನಾವು ನಮ್ಮ ಜೀವನದ ಶಿಲ್ಪಿಗಳು. ನಮಗೆ ನಾವೇ ಬೆಳಕಾಗಬೇಕು. ಈ ಅಮೋಘ ಕವಿತೆಯ ಸಂದೇಶ ನಮಗೆ ದಾರಿದೀಪವಾಗಿದೆ:

**"ನೆಪದ ಕಲ್ಲನು ಸರಿಸಿ, ಮುನ್ನಡೆವ ನದಿಯಾಗು ನೀನು,**
**ವಿಧಿಯ ಹಣೆಬರಹವನು ಸೀಳಿ, ಗೆಲುವಿನ ಇತಿಹಾಸ ಬರೆಯು ನೀನು.**
**ಕತ್ತಲೆಯ ಹಾದಿಯಲಿ ನಿನ್ನದೇ ಬೆಳಕ ಹೊಸೆಯುತ ಸಾಗು,**
**ಶತಕೋಟಿ ಸೂರ್ಯರ ಸೋಲಿಸುವ ಚೇತನ ನೀನಾಗು!**
**ನಾವು ಬದಲಾದರೆ ನಮ್ಮ ಸುತ್ತಲಿನ ಪರಿಸ್ಥಿತಿಯೂ ಬದಲಾಗುತ್ತದೆ ಮತ್ತು ಯಶಸ್ಸಿನ ಹಾದಿ ತಾನಾಗಿಯೇ ತೆರೆದುಕೊಳ್ಳುತ್ತದೆ."**

**ಕೊನೆ ಹನಿ**

ನಮ್ಮ ಹಣೆಬರಹವನ್ನು ನಾವೇ ಬರೆಯಬೇಕಾದರೆ ದೃಢವಾದ ಹೆಜ್ಜೆ ಇಡಬೇಕು. ಅದಕ್ಕೆ ಪೂರಕವಾಗಿ ಇದರೊಂದಿಗೆ. ಸ್ಟೀವ್ ಜಾಬ್ಸ್ ಅವರ ಮಾತುಗಳಾದ, "ನಿಮ್ಮ ಸಮಯ ಸೀಮಿತವಾಗಿದೆ, ಆದ್ದರಿಂದ ಅದನ್ನು ಬೇರೆಯವರ ಜೀವನವನ್ನು ಬದುಕುತ್ತಾ ವ್ಯರ್ಥ ಮಾಡಬೇಡಿ" ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಕೊನೆಯದಾಗಿ, ಬದುಕು ಒಂದು ಕನ್ನಡಿಯಿದ್ದಂತೆ; ನೆಪಗಳ ಬಲೆಗೆ ಸಿಕ್ಕರೆ ಬಾಳು ಗೋಳಾಗುತ್ತದೆ. ಆದರೆ ಸಕಾರಾತ್ಮಕ ಆಲೋಚನೆಗಳ ಜೊತೆ ಮುನ್ನಡೆದರೆ ಅವು ನಮ್ಮನ್ನು ಹರಿಯುವ ನದಿಯಂತೆ ವಿಜಯದ ತೀರಕ್ಕೆ ತಲುಪಿಸುತ್ತವೆ.

---

## ಸಕಾಲಕ್ಕೆ ವೇತನ, ಇಎಸ್‌ಐ, ಇಪಿಎಫ್ ಪಾವತಿಗೆ ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಸೂಚನೆ

# ಪೌರಕಾರ್ಮಿಕರ ಕ್ಷೇಮಾಭಿವೃದ್ಧಿಗೆ ಆದ್ಯತೆ :ಎಡಿಸಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಪೌರಕಾರ್ಮಿಕರ ಹಿತರಕ್ಷಣೆ ಹಾಗೂ ಕ್ಷೇಮಾಭಿವೃದ್ಧಿಗೆ ಆದ್ಯತೆ ನೀಡುವುದರೊಂದಿಗೆ ಪ್ರತಿ ತಿಂಗಳು ವಿಳಂಬವಿಲ್ಲದೆ ವೇತನ ಪಾವತಿಸಿ, ಇಎಸ್‌ಐ ಮತ್ತು ಇಪಿಎಫ್ ವಂತಿಗೆಗಳನ್ನು ನಿಯಮಿತವಾಗಿ ಜಮೆ ಮಾಡಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಡಾ. ಔದ್ರಾಮ ಸೂಚಿಸಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ–2013ರಡಿ ನಡೆದ ಜಿಲ್ಲಾ ಮಟ್ಟದ 3ನೇ ತ್ರೈಮಾಸಿಕ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪೌರಕಾರ್ಮಿಕರಿಗೆ ವೇತನ ರಸೀದಿ ನೀಡುವುದರ ಜೊತೆಗೆ, ಮಹಾನಗರ ಪಾಲಿಕೆ ಮಾದರಿಯಲ್ಲಿ ಜಿಲ್ಲೆಯ ಪುರಸಭೆ, ನಗರಸಭೆ ಹಾಗೂ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿಯೂ ನಿಯಮಿತವಾಗಿ ಉಚಿತ ವೈದ್ಯಕೀಯ ಶಿಬಿರಗಳನ್ನು ಆಯೋಜಿಸಬೇಕು. ತಪಾಸಣೆ ವೇಳೆ ಗಂಭೀರ ಕಾಯಿಲೆಗಳು ಕಂಡುಬಂದಲ್ಲಿ ನುರಿತ ವೈದ್ಯರಿಂದ ಸೂಕ್ತ ಚಿಕಿತ್ಸೆ ಕೊಡಿಸುವುದರ ಜೊತೆಗೆ, ಅನಾರೋಗ್ಯದ ಸಂದರ್ಭದಲ್ಲಿ ರಜೆ ಹಾಗೂ ವಿಶ್ರಾಂತಿಗೆ ಅಗತ್ಯ ಅವಕಾಶ ಕಲ್ಪಿಸಬೇಕು ಎಂದು ನಿರ್ದೇಶನ ನೀಡಿದರು.

ಖಾಯಂ ಹಾಗೂ ನೇರ ವೇತನ ಪಡೆಯುವ ಪೌರಕಾರ್ಮಿಕರಿಗೆ ಕಾಯ್ದೆಯನ್ವಯ ಅಗತ್ಯ ಸುರಕ್ಷತಾ ಪರಿಕರಗಳು, ಸಮವಸ್ತ್ರ ಹಾಗೂ ಗುರುತಿನ ಚೀಟಿಗಳನ್ನು ವಿತರಿಸಿ, ಅವುಗಳನ್ನು ಕಡ್ಡಾಯವಾಗಿ ಬಳಸಿಕೊಂಡು ಕರ್ತವ್ಯ ನಿರ್ವಹಿಸುವಂತೆ ಜಾಗೃತಿ ಮೂಡಿಸಬೇಕು. ಕಾರ್ಯಾಗಾರ ಹಾಗೂ ಪೌರಕಾರ್ಮಿಕರ ದಿನಾಚರಣೆ ಸಂದರ್ಭದಲ್ಲಿ ಸುರಕ್ಷತಾ ಕ್ರಮಗಳ ಕುರಿತು ಅರಿವು ಮೂಡಿಸುವಂತೆ ತಿಳಿಸಿದರು. ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಪುನರ್ವಸತಿ ಅಧಿನಿಯಮ–2013ರ ಸೆಕ್ಷನ್ 13 ಮತ್ತು 16ರನ್ವಯ ವಿಜಯಪುರ ಜಿಲ್ಲೆಯ ಮಹಾನಗರ ಪಾಲಿಕೆ ಸೇರಿದಂತೆ ಒಟ್ಟು 15 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪ್ರಸ್ತುತ ಯಾವುದೇ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಇಲ್ಲವೆಂದು ವೆಬ್‌ಪೋರ್ಟಲ್‌ನಲ್ಲಿ ದಾಖಲಿಸಲಾಗಿದೆ. ಕಾಯ್ದೆಗೆ ವಿರುದ್ಧವಾಗಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ನಡೆಯುತ್ತಿರುವುದು ಕಂಡುಬಂದಲ್ಲಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಎಚ್ಚರಿಸಿದರು.

ಸಭೆಯಲ್ಲಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 592 ಖಾಯಂ ಪೌರಕಾರ್ಮಿಕರ ಪೈಕಿ 314 ಮಂದಿಗೆ 'ಗೃಹಭಾಗ್ಯ' ಯೋಜನೆಯಡಿ ವಸತಿ ಸೌಲಭ್ಯ ಕಲ್ಪಿಸಿರುವ ಕುರಿತು ಮಾಹಿತಿ ನೀಡಲಾಯಿತು. ಇದೇ ವೇಳೆ ಬಿಎಲ್‌ಸಿ–198 ಹಾಗೂ ಎಎಚ್‌ಪಿ–136ರಡಿ ಒಟ್ಟು 334 ಮನೆಗಳಿಗೆ ಅನುಮೋದನೆ ದೊರೆತಿದ್ದು, ಬಿಎಲ್‌ಸಿ ಯೋಜನೆಯಡಿ 173 ಮನೆಗಳ ನಿರ್ಮಾಣ ಪೂರ್ಣಗೊಂಡಿದೆ. ಉಳಿದ ಮನೆಗಳ ಕಾಮಗಾರಿ ಪ್ರಗತಿಯಲ್ಲಿದ್ದು, ವಿಜಯಪುರ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 116 ಮನೆಗಳ ಹಕ್ಕುಪತ್ರಗಳನ್ನು ವಿತರಿಸಲಾಗಿದೆ ಎಂದು ತಿಳಿಸಲಾಯಿತು. ಸಭೆಯಲ್ಲಿ ಪಾಲಿಕೆ ಆಯುಕ್ತರಾದ ವಿಜಯ ಮೆಕ್ಕಳಕಿ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಮಹೇಶ ಪೋತದಾರ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಿಬ್ಬಂದಿ ಹಾಗೂ ಪೌರಕಾರ್ಮಿಕ ಸಮಿತಿಯ ನಾಮನಿರ್ದೇಶನದ ಸದಸ್ಯರು ಉಪಸ್ಥಿತರಿದ್ದರು.

---

# ಸಂಚಾರಿ ನಿಯಮಗಳ ಪಾಲನೆ ಕುರಿತು ಜಾಗೃತಿ ಮೂಡಿಸಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಸಂಚಾರಿ ನಿಯಮಗಳ ಹೆಸರಿನಲ್ಲಿ ದಂಡ ಸಂಗ್ರಹಿಸುವುದಕ್ಕಿಂತ, ನಿಯಮಗಳ ಪಾಲನೆ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಲು ಯುವ ಮುಖಂಡ ಸಂತೋಷ ಬಗಲಿ ಆಗ್ರಹಿಸಿದ್ದಾರೆ.

ಈ ಕುರಿತು ಜಿಲ್ಲಾಧಿಕಾರಿಗೆ ಮಂಗಳವಾರ ಮನವಿ ಸಲ್ಲಿಸಿದ ಅವರು, ರಾಜ್ಯದಲ್ಲಿ ರಸ್ತೆ ಸುರಕ್ಷತೆ ಮತ್ತು ಸಂಚಾರಿ ನಿಯಮಗಳ ಪಾಲನೆ ಅತ್ಯಂತ ಮಹತ್ವದ ವಿಚಾರವಾಗಿದೆ. ಪ್ರತಿಯೊಬ್ಬ ವಾಹನ ಸವಾರರು ಸಂಚಾರಿ ನಿಯಮಗಳನ್ನು ಪಾಲಿಸುವುದು ತಮ್ಮ ಹಾಗೂ ಇತರರ ಜೀವದ ಸುರಕ್ಷತೆಗೆ ಅಗತ್ಯವಾಗಿದೆ. ಆದರೆ ಸಂಚಾರಿ ನಿಯಮಗಳ ಅನುಷ್ಠಾನವು ಕೇವಲ ದಂಡ ವಿಧಿಸುವ ಮತ್ತು ದಂಡ ಸಂಗ್ರಹಿಸುವ ಕ್ರಮಕ್ಕೆ ಸೀಮಿತವಾಗಬಾರದು ಎಂಬುದು ಸಾರ್ವಜನಿಕರ ಪರವಾದ ನಮ್ಮ ಮನವಿಯಾಗಿದೆ ಎಂದು ಹೇಳಿದರು.

ಸಂಚಾರಿ ನಿಯಮ ಉಲ್ಲಂಘನೆ ಮಾಡಿದಾಗ ಕಾನೂನುಬದ್ಧ ಕ್ರಮ ಕೈಗೊಳ್ಳುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ ನಿಯಮ ಉಲ್ಲಂಘನೆಯ ನಂತರ ದಂಡ ವಿಧಿಸುವುದಕ್ಕಿಂತ, ನಿಯಮ ಉಲ್ಲಂಘನೆ ಆಗದಂತೆ ಮುನ್ನೆಚ್ಚರಿಕೆ ಮತ್ತು ಜಾಗೃತಿ ಮೂಡಿಸುವ ವ್ಯವಸ್ಥೆಗೆ ಹೆಚ್ಚಿನ ಆದ್ಯತೆ ನೀಡಬೇಕು.

ವಿಶೇಷವಾಗಿ ಗ್ರಾಮೀಣ ಪ್ರದೇಶಗಳು, ಪಟ್ಟಣಗಳು, ಕಾಲೇಜುಗಳು, ಶಾಲೆಗಳು, ಮಾರುಕಟ್ಟೆ ಪ್ರದೇಶಗಳು ಹಾಗೂ ಪ್ರಮುಖ ರಸ್ತೆಗಳಲ್ಲಿ ಸಂಚಾರಿ ನಿಯಮಗಳ ಕುರಿತು ನಿರಂತರ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಹೆಲ್ಮೆಟ್ ಧರಿಸುವುದು, ಸೀಟ್ ಬೆಲ್ಟ್ ಬಳಕೆ, ವೇಗದ ಮಿತಿ ಪಾಲನೆ, ಮೊಬೈಲ್ ಬಳಸದಿರುವುದು, ಮದ್ಯಪಾನ ಮಾಡಿ ವಾಹನ ಚಲಾಯಿಸದಿರುವುದು, ವಾಹನದ ದಾಖಲೆಗಳನ್ನು ಸರಿಯಾಗಿ ಇಟ್ಟುಕೊಳ್ಳುವುದು ಸೇರಿದಂತೆ ವಿವಿಧ ನಿಯಮಗಳ ಕುರಿತು ಜನರಿಗೆ ಸರಳವಾಗಿ ತಿಳಿಸಬೇಕು. ಅದೇ ರೀತಿ ಅಪಘಾತಗಳಿಗೆ ಕಾರಣವಾಗುವ ಗುಂಡಿ ಬಿದ್ದ ರಸ್ತೆಗಳು, ಅಪಾಯಕಾರಿ ತಿರುವುಗಳು, ಸೂಕ್ತ ರಸ್ತೆ ಸೂಚನಾ ಫಲಕಗಳ ಕೊರತೆ, ಸಮರ್ಪಕ ಬೆಳಕಿನ ಕೊರತೆ ಹಾಗೂ ಅಗತ್ಯವಿರುವ ಕಡೆ ಸ್ಪೀಡ್ ಬ್ರೇಕರ್‌ಗಳ ಕೊರತೆ ಮುಂತಾದ ಮೂಲಸೌಕರ್ಯ ಸಮಸ್ಯೆಗಳನ್ನೂ ಸಂಬಂಧಪಟ್ಟ ಇಲಾಖೆಗಳು ಗುರುತಿಸಿ ಪರಿಹರಿಸಬೇಕು. ಸಂಚಾರಿ ನಿಯಮಗಳು ಜನರ ಸುರಕ್ಷತೆಗಾಗಿ ಇರುವುದೇ ಹೊರತು ಸರ್ಕಾರಕ್ಕೆ ಆದಾಯ ಸಂಗ್ರಹಿಸುವ ಸಾಧನವಾಗಬಾರದು. ಆದ್ದರಿಂದ "ದಂಡಕ್ಕಿಂತ ಜಾಗೃತಿ ಆದಾಯಕ್ಕಿಂತ ರಸ್ತೆ ಸುರಕ್ಷತೆ" ಎಂಬ ದೃಷ್ಟಿಕೋನದಲ್ಲಿ ಸಂಚಾರಿ ವ್ಯವಸ್ಥೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ರೂಪಿಸುವ ಅಗತ್ಯವಿದೆ.

ಹೀಗಾಗಿ ಮಾನ್ಯ ಗೃಹ ಸಚಿವರು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳುವಂತೆ ಮನವಿ ಮಾಡುತ್ತೇನೆ: ಸಂಚಾರಿ ನಿಯಮಗಳ ಪಾಲನೆ ಕುರಿತು ಜಿಲ್ಲೆ ಮತ್ತು ತಾಲೂಕು ಮಟ್ಟದಲ್ಲಿ ನಿರಂತರ ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಳ್ಳಬೇಕು. ರಸ್ತೆ ಸುರಕ್ಷತಾ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಆದ್ದರಿಂದ ಸಂಚಾರಿ ನಿಯಮಗಳ ಅನುಷ್ಠಾನದಲ್ಲಿ ದಂಡ ಸಂಗ್ರಹಣೆಗೆ ಮಾತ್ರ ಆದ್ಯತೆ ನೀಡದೆ, ಜಾಗೃತಿ, ಮುನ್ನೆಚ್ಚರಿಕೆ ಮತ್ತು ರಸ್ತೆ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುವಂತೆ ಸಂಬಂಧಪಟ್ಟ ಇಲಾಖೆಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಸಂತೋಷ ಬಗಲಿ ಜಿಲ್ಲಾಧಿಕಾರಿಗಳ ಮೂಲಕ ಮಾನ್ಯ ಗೃಹ ಸಚಿವರಲ್ಲಿ ಮನವಿ ಮಾಡಿದ್ದಾರೆ.

---

## ವಿಜಯಪುರದಲ್ಲಿ ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಅಧಿಕಾರಿಗಳಿಗೆ ಸೂಚನೆ

# ಅಲೆಮಾರಿ, ಅರೆ ಅಲೆಮಾರಿ ಜನಾಂಗದವರಿಗೆ ಯೋಜನೆ ತಲುಪಿಸಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದವರ ಮನವಿ ಹಾಗೂ ನಿಯಮಾನುಸಾರ ವಿವಿಧ ಯೋಜನೆಗಳಡಿ ಸರ್ಕಾರದ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಕರ್ನಾಟಕ ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡದ ಅಲೆಮಾರಿ ಸಮುದಾಯಗಳ ಹಾಗೂ ಕರ್ನಾಟಕ ಪರಿಶಿಷ್ಟ ಪಂಗಡದ ಮೇದಾರ ಅಲೆಮಾರಿ ಸಮುದಾಯಗಳ ಮೂರನೇ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅರ್ಹರಿಗೆ ಯೋಜನೆಯ ಲಾಭ ತಲುಪಿಸಬೇಕು. ಬ್ಯಾಂಕಿನಲ್ಲಿ ಈ ಫಲಾನುಭವಿಗಳಿಗೆ ಸಾಲ ಸೌಲಭ್ಯ ಕಲ್ಪಿಸಲು ವಿಳಂಬ ಮಾಡಬಾರದು ಎಂದು ಬ್ಯಾಂಕಿನ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಮುದಾಯದ ಭಿವೃದ್ಧಿಗಾಗಿ ಸರ್ಕಾರ ಹಲವಾರು ಯೋಜನೆಗಳನ್ನು ಅನುಷ್ಟಾನಗೊಳಿಸುತ್ತಿದ್ದು, ಅವರಿಗೆ ದೊರಕಬೇಕಾದ ಸೌಲಭ್ಯಗಳನ್ನು ತಲುಪಿಸಬೇಕು ಎಂದರು. 2025 ರಿಂದ 26ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ವಿವಿಧ ಯೋಜನೆಯಡಿ ನಿಗದಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಗಳ ಮಾಹಿತಿ ವಿವರವನ್ನು ಸಭೆಗೆ ಮಂಡಿಸಲಾಯಿತು.

ಜೊತೆಗೆ ಅವರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಕೂಡಲೇ ಒದಗಿಸಬೇಕು. ಮಕ್ಕಳ ಶಿಕ್ಷಣಕ್ಕಾಗಿ ಒತ್ತು



ನೀಡುವುದು, ಸಮುದಾಯ ಭವನ ನಿರ್ಮಾಣ, ಬೀದಿ ದೀಪ, ಸ್ಮಶಾನ ಭೂಮಿ, ರೇಷನ್ ಕಾರ್ಡ್, ಈ ಸಮುದಾಯ ವಾಸಿಸುವ ಕಾಲೊನಿಯಲ್ಲಿ ಮೂಲಭೂತ ಸೌಕರ್ಯ ಒದಗಿಸಿ ಅಭಿವೃದ್ಧಿ ಪಡಿಸುವಂತೆ ಸಮಿತಿ ಸದಸ್ಯರು ಸಭೆಗೆ ಕೋರಿದರು.


2026–27ನೇ ಸಾಲಿನ ಪರಿಶಿಷ್ಟ ಪಂಗಡದ ಮೇದಾರ ಅಲೆಮಾರಿ ಸಮುದಾಯ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಸಭೆ ನಡೆಸಲಾಯಿತು.

ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಹೇಶ ಪೋತದಾರ, ಜಂಟಿ ಕೃಷಿ ನಿರ್ದೇಶಕರಾದ ಶಿವನಗೌಡ ಪಾಟೀಲ, ತೋಟಗಾರಿಕಾ ಇಲಾಖೆಯ ಜಂಟಿ ನಿರ್ದೇಶಕರಾದ ಸಿದ್ರಾಮ ಬರಗೀಮಠ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಹಣಮಂತ ಕಾಲತಿಪ್ಪಿ, ಹೆಸ್ಕಾಂ ಅಧೀಕ್ಷಕ ಅಭಿಯಂತರರಾದ ಸಿದ್ದಪ್ಪ ಬಿಂಜಗೇರಿ ಸೇರಿದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಸಮುದಾಯದ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಸದಸ್ಯರಾದ ಕಾಮಣ್ಣ ದೇವಪ್ಪ ದಶವಂತ, ಬಾಬು ಭೀಮಪ್ಪ ಭಜಂತ್ರಿ, ಲಕ್ಷ್ಮಣ ನಾಗಪ್ಪ ಭಜಂತ್ರಿ, ಭೀಮರಾಯ ಲಕ್ಷ್ಮಣ ಕಟ್ಟಿಮನಿ, ವಾಸುದೇವ ಕಾಳೆ ಹಾಗೂ ಪರಿಶಿಷ್ಟ ಪಂಗಡದ ಮೇದಾರ ಅಲೆಮಾರಿ ಸಮುದಾಯ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಸದಸ್ಯರಾದ ವಿಠ್ಠಲ ಎನ್ ಪರಾಂಡೆ, ಶ್ರೀಮತಿ ಮಂದಾಬಾಯಿ ಬಸವರಾಜ ಗೊಳಸಂಗಿ, ಉಮೇಶ ಸದಾಶಿವ ಗೊಳಸಂಗಿ ಸೇರಿದಂತೆ ಜಿಲ್ಲಾ ಹಾಗೂ ತಾಲೂಕಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

---

## ಕೃಷ್ಣವೇಣಿ ಗೆ ಡಾಕ್ಟರೇಟ್

ಬೀದರ್ : ಕಲಬುರಗಿ ನಗರದ ಎಚ್.ಕೆ.ಇ. ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಎಂ.ಎಸ್.ಐ. ಪದವಿ ಪೂರ್ವ ಕಾಲೇಜಿನಲ್ಲಿ ಆಂಗ್ಲ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಕೃಷ್ಣವೇಣಿ ಬಿ. ಪಾಟೀಲ್ ಅವರಿಗೆ ರಾಜಸ್ಥಾನದ ಅಲ್ವಾರ್‌ನ ಸನ್‌ರೈಸ್ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ಪ್ರದಾನ ಮಾಡಿದೆ. "ಕೋಲೊನಿಯಲ್ ಐಂಡ್‌ಪೋಸ್ಟ್‌ಕೋಲೊನಿಯಲ್ ರೆಂಡಿಷನ್ಸ್ ಇನ್ ಚಿನುವಾ ಅಂಬೆ ನವೆಲ್ಸ್: ಎ ಸೆಲೆಕ್ಟ್ ಸ್ಟಡಿ" ವಿಷಯದ ಕುರಿತು ಅವರು ಮಂಡಿಸಿದ ಮಹಾ ಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಲಭಿಸಿದೆ. ಹಿರಿಯ ಪ್ರಾಧ್ಯಾಪಕರಾದ ಡಾ. ಉಮಾಕಾಂತ ಎಸ್. ಪಾಟೀಲ್ ಅವರ ಮಾರ್ಗದರ್ಶನದಲ್ಲಿ ಸಂಶೋಧನಾ ಪ್ರಬಂಧ ಮಂಡಿಸಿದ್ದರು.



# ರೈತರ ಜಮೀನುಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹ

■ ಉದಯರಶ್ಮಿ ದಿನಪತ್ರಿಕೆ

ಬಸವನಬಾಗೇವಾಡಿ: ಪಟ್ಟಣದ ವಿವೇಕ ಬ್ರಿಗೇಡ್ ಸಂಘಟನೆಯಿಂದ ರೈತರ ಜಮೀನುಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆಗೆ ಹೆಸ್ಕಾಂ ಇಲಾಖೆಯು ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹಿಸಿ ಮಂಗಳವಾರ ಹೆಸ್ಕಾಂ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರ ಡಬ್ಲ್ಯೂ.ಎ. ಜಾಗೀರದಾರ ಅವರಿಗೆ ಮನವಿ ಸಲ್ಲಿಸಲಾಯಿತು.

ಅವರು ಸಲ್ಲಿಸಿದ ಮನವಿಯಲ್ಲಿ ತಾಲೂಕಿನಲ್ಲಿ ತೀವ್ರ ಪ್ರಕಾರ ಉಂಟಾಗಿದೆ. ನೀರಾವರಿ ಜಮೀನುಗಳು ಅಷ್ಟೇ ಕೆಲವು ಅವಲಂಬಿತ ಬಿತ್ತನೆಯಾಗಿದೆ. ಅವುಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಇಲ್ಲದ ಕಾರಣ ರೈತರಿಗೆ ಬೆಳೆಗಳಿಗೆ ನೀರು ಉಣಿಸಲು ತುಂಬಾ ಕಷ್ಟವಾಗಿದೆ. ಬಿತ್ತನೆ ಮಾಡಿದ ಬೆಳೆಗಳಿಗೆ ಸರಿಯಾಗಿ ನೀರಿಲ್ಲದೆ ಒಣಗುತ್ತಿವೆ. ಹೆಸ್ಕಾಂ ಇಲಾಖೆಯು ರೈತರಿಗೆ ಸಮರ್ಪಕವಾಗಿ ಏಳು ಗಂಟೆಗಳ ಕಾಲ ವಿದ್ಯುತ್ತನ್ನು ಹಗಲು ಹೊತ್ತಿನಲ್ಲಿ ಯಾವುದೇ ನಿರಂತರ (ಲೋಡ್ ಸೆಡ್ಡಿಂಗ್ ಇಲ್ಲದೇ) ವಿದ್ಯುತ್ ಪೂರೈಕೆ ಮಾಡಬೇಕೆಂದು ಆಗ್ರಹಿಸಲಾಗಿದೆ.

**ಬಸವನಬಾಗೇವಾಡಿಯ ವಿವೇಕ ಬ್ರಿಗೇಡ್ ಸಂಘಟನೆಯಿಂದ ಹೆಸ್ಕಾಂ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಮನವಿ**

ಈ ಸಂದರ್ಭದಲ್ಲಿ ಹೆಸ್ಕಾಂ ಇಲಾಖೆಯ ಎಇಇ ರೂಪೇಶ ಶಾ,ವಿವೇಕ ಬ್ರಿಗೇಡ್ ಸಂಘಟನೆಯ ವಿನುತ ಕಲ್ಲೂರ,ರವಿ ಚಿಕ್ಕೊಂಡ,ಅಶೋಕ ಕಲ್ಲೂರ,ಮಣಿಕಂಠ ಕಲ್ಲೂರ, ಸಚಿನ ಕಲ್ಲೂರ, ರೈತರಾದ ಸುಭಾಸ ಕಲ್ಲೂರ, ಸಚಿನ ಪವಾರ, ಮುರುಗೇಶ ಕೊಟ್ರಶೆಟ್ಟಿ, ಕುಮಾರ ಕೊಟ್ರಶೆಟ್ಟಿ, ಮುರುಗೇಶ ಮಾಲಗಾರ, ಅರುಣ ಮಾಲಗಾರ, ಸುರೇಶ ಗಾಯಕವಾಡ, ಮಲ್ಲು ಬನಾಸಿ, ಶಿವು ಬಟ್ಟಲ ಇತರರು ಇದ್ದರು.

# ಎ.ವಿ.ಎಸ್.ಆಯುರ್ವೇದ ಕಾಲೇಜಿನಲ್ಲಿ ಉಚಿತ ಆರೋಗ್ಯ ತಪಾಸಣೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎ.ವಿ. ಎಸ್. ಆಯುರ್ವೇದ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದಲ್ಲಿ 11ನೇ ರಾಷ್ಟ್ರೀಯ ಆಯುರ್ವೇದ ದಿನದ ಅಂಗವಾಗಿ ಉಚಿತ ಆರೋಗ್ಯ ತಪಾಸಣೆ ಶಿಬಿರ, ಉಚಿತ ರಕ್ತ ತಪಾಸಣೆ((Hb and RBS) ಹಾಗೂ ಔಷಧ ವಿತರಣೆ ಕಾರ್ಯಕ್ರಮ ಮಂಗಳವಾರ ನಡೆಯಿತು. ಜಿಲ್ಲಾ ಆಯುಷ್ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಆಯುರ್ವೇದ ಆಸ್ಪತ್ರೆಯಲ್ಲಿ ನಡೆದ ಈ ಶಿಬಿರವನ್ನು ಜಿಲ್ಲಾ ಆಯುಷ್ ಅಧಿಕಾರಿ ಡಾ. ವಿದ್ಯಾವತಿ ಅಥಣಿ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಹಿಂದಿಗಿಂತಲೂ ಇಂದು ಆಯುರ್ವೇದವನ್ನು ಮನೆ ಮನೆಗೆ ತಲುಪಿಸುವ ಅಗತ್ಯತೆ ಹೆಚ್ಚಾಗಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಪಥ್ಯ ಆಹಾರ ಪತ್ರಿಕೆಯ ಅನಾವರಣ ನಡೆಯಿತು. ಆಸ್ಪತ್ರೆಯ ರೋಗಿಗಳಿಗೆ ಆಯುರ್ವೇದ ಪಥ್ಯ ಆಹಾರವನ್ನು ಕೊಡಮಾಡುವ ಕಾರ್ಯಕ್ರಮಕ್ಕೆ ಚಾಲನೆ ಕೊಡಲಾಯಿತು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ. ಅಶೋಕ ಪಾಟೀಲ, ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಸಂಜಯ ಕಡ್ಲಿಮಟ್ಟಿ, ಕಾಯಚಿಕಿತ್ಸೆ ವಿಭಾಗದ ಮುಖ್ಯಸ್ಥೆ ಡಾ. ಉಮಾ ಪಾಟೀಲ, ಡಿವೈಎಂಎಸ್ ಡಾ. ಜಾವೀದ್ ಬಾಗಾಯತ, ಎಎಓ ಡಾ. ಸಂಜೀವ ಕುಲಕರ್ಣಿ ಉಪಸ್ಥಿತರಿದ್ದರು.

ಸುಮಾರು 100ಕ್ಕೂ ಹೆಚ್ಚು ರೋಗಿಗಳು ಈ ಶಿಬಿರದ ಸದುಪಯೋಗ ಪಡೆದುಕೊಂಡರು.

# ಕಾರ್ಖಾನೆ ಉಳಿವಿಗೆ ಶಕ್ತಿಮೀರಿ ಪ್ರಯತ್ನ :ಶಾಸಕ ಪಾಟೀಲ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಭೀಮಾ ನದಿ ಪಾತ್ರದಲ್ಲಿ ಕಬ್ಬಿನ ರಿಕವರಿ ಪ್ರಮಾಣ ಕಡಿಮೆ ಇರುವುದರಿಂದ ಸಕ್ಕರೆ ಕಾರ್ಖಾನೆ ನಡೆಸುವುದು ಸವಾಲಿನ ಕೆಲಸವಾಗಿದೆ. ಆದರೂ ಈ ಭಾಗದ ರೈತರ ಹಿತದೃಷ್ಟಿಯಿಂದ ಭೀಮಾಶಂಕರ ಸಹಕಾರ ಸಕ್ಕರೆ ಕಾರ್ಖಾನೆಯ ಉಳಿವು ಹಾಗೂ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶಕ್ತಿಮೀರಿ ಶ್ರಮಿಸುತ್ತಿದ್ದೇನೆ ಎಂದು ಶಾಸಕ ಹಾಗೂ ಭೀಮಾಶಂಕರ ಸಹಕಾರ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಯಶವಂತರಾಯಗೌಡ ಪಾಟೀಲ ಹೇಳಿದರು.

ಚಡಚಣ ತಾಲೂಕಿನ ಮರಗೂರ– ಧೂಳಖೇಡದ ಭೀಮಾಶಂಕರ ಸಹಕಾರ ಸಕ್ಕರೆ ಕಾರ್ಖಾನೆ ಆವರಣದಲ್ಲಿ ನಡೆದ 2025– 26ನೇ ಸಾಲಿನ 8ನೇ ವಾರ್ಷಿಕ ಸರ್ವಸಾಧಾರಣ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಹಕಾರ ಕ್ಷೇತ್ರವು ಸರ್ಕಾರದಿಂದ ಸಾಧ್ಯವಾಗದ ಹಲವು ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಿದೆ. ಆದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಿಯಮಗಳು ಸೇರಿದಂತೆ ವಿವಿಧ ಕಾರಣಗಳಿಂದ ಅನೇಕ ಸಕ್ಕರೆ ಕಾರ್ಖಾನೆಗಳು ಸಂಕಷ್ಟ ಎದುರಿಸುತ್ತಿವೆ. ಪ್ರಸಕ್ತ ಸಾಲಿನಲ್ಲಿ ಮಳೆ ಕೊರತೆಯಿಂದ ಕಬ್ಬು ಬೆಳೆದ ರೈತರೂ ಸಮಸ್ಯೆ ಎದುರಿಸುವಂತಾಗಿದೆ. ಕಬ್ಬಿನ ರಿಕವರಿ ಪ್ರಮಾಣವನ್ನು ಪರಿಗಣಿಸಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸಭೆಯಲ್ಲಿ 2025– 26ನೇ ಸಾಲಿನ ವಾರ್ಷಿಕ ಕಾರ್ಯವರದಿ, ಆರ್ಥಿಕ ಸ್ಥಿತಿಗತಿ, ಪ್ರಸಕ್ತ ಸಾಲಿನ ಕಬ್ಬು ನುರಿಸುವ ಹಂಗಾಮಿನ ಸಿದ್ಧತೆ, ಕೈಗೊಂಡಿರುವ ಆದ–ುನೀಕರಣ ಮತ್ತು ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಹಾಗೂ ಮುಂದಿನ ದಿನಗಳಲ್ಲಿ ಕೈಗೊಳ್ಳಲಿರುವ ಯೋಜನೆಗಳ ಕು–ರಿತು ಶೇರುದಾರ ಸದಸ್ಯರು ಹಾಗೂ ರೈತರಿಗೆ ಮಾಹಿತಿ ನೀಡಲಾಯಿತು.



**ಅತಿ ಹೆಚ್ಚು ಕಬ್ಬು ಪೂರೈಸಿದ ರೈತರಿಗೆ ಸನ್ಮಾನ**

ಕಾರ್ಖಾನೆಗೆ ಅತಿ ಹೆಚ್ಚು ಕಬ್ಬು ಪೂರೈಸಿದ ಶ್ರೀಮಂತ ಇಂಡಿ, ವಿಶ್ವನಾಥ ಧರೆಪ್ಪ, ಬೀರಪ್ಪ ಪೂಜಾರಿ, ಅಮೀನಸಾಬ ಜಾತಗಾರ ಸೇರಿದಂತೆ ಹಲವು ರೈತರನ್ನು ಕಾರ್ಖಾನೆ ವತಿಯಿಂದ ಸನ್ಮಾನಿಸಲಾಯಿತು.

**ರೈತರ ಸಹಕಾರವೇ ಕಾರ್ಖಾನೆಯ ಶಕ್ತಿ । ರಿಕವರಿ ಕಡಿಮೆಯಾದರೂ ರೈತರ ಕೈಬಿಡಲ್ಲ । ಭೀಮಾಶಂಕರ ಉಳಿವಿಗೆ ಶಾಸಕ ಯಶವಂತರಾಯಗೌಡ ಒಗ್ಗಟ್ಟಿನ ಕರೆ**

ಈ ಸಂದರ್ಭದಲ್ಲಿ ಎಂ.ಆರ್. ಪಾಟೀಲ, ರೇವಗೊಂಡಪ್ಪ ಪಾಟೀಲ, ವಿಶ್ವನಾಥ ಬಿರಾದಾರ, ಬಸಣ್ಣ ಕೋರೆ, ಸಿದ್ದಣ್ಣ ಬಿರಾದಾರ, ಜಟ್ಟೆಪ್ಪ ರವುಳಿ, ಸುರೇಶಗೌಡ ಪಾಟೀಲ, ಅಶೋಕ ಗಜಾಕೋಶ, ಬಸವರಾಜ ಧನಶ್ರೀ, ಅಪ್ಪು ನಡಗೇರಿ, ಸಿದ್ದುಗೌಡ ಬಿರಾದಾರ, ದುಂಡಪ್ಪ ಬೇಡಾ, ಎಸ್.ಕೆ. ಭಾಗ್ಯಶ್ರೀ ಸೇರಿದಂತೆ ರೈತರು, ಶೇರುದಾರರು ಹಾಗೂ ಕಾರ್ಮಿಕರು ಉಪಸ್ಥಿತರಿದ್ದರು.

# ಬಸವನಬಾಗೇವಾಡಿಯಲ್ಲಿ ವಿವೇಕ ಬ್ರಿಗೇಡ್ ಸಂಘಟನೆಯಿಂದ ಮನವಿ ರೈತರ ಸಾಲ ಮನ್ನಾ, ಜಿಲ್ಲೆಯನ್ನು 371(ಜೆ) ಸೇರ್ಪಡೆಗೊಳಿಸಲು ಆಗ್ರಹ

■ ಉದಯರಶ್ಮಿ ದಿನಪತ್ರಿಕೆ



ಬಸವನಬಾಗೇವಾಡಿ: ಪಟ್ಟಣದ ವಿವೇಕ ಬ್ರಿಗೇಡ್ ಸಂಘಟನೆಯಿಂದ ವಿಜಯಪುರ ಜಿಲ್ಲೆಯನ್ನು ಸಂವಿಧಾನದ 371(ಜೆ) ವಿಧಿಯಡಿ ಸೇರ್ಪಡೆ ಹಾಗೂ ರೈತರ ಸಾಲ ಮನ್ನಾ ಮಾಡುವಂತೆ ಆಗ್ರಹಿಸಿ ತಹಸೀಲ್ದಾರ ಅವರಿಗೆ ಮಂಗಳವಾರ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ವಿವೇಕ ಬ್ರಿಗೇಡ್ ಸಂಘಟನೆಯ ಮುಖ್ಯಸ್ಥ ವಿನುತ ಕಲ್ಲೂರ ಮಾತನಾಡಿ, ವಿಜಯಪುರ ಜಿಲ್ಲೆಯನ್ನು ಸಂವಿಧಾನದ 371(ಜೆ) ವಿಧಿಯಡಿ ಸೇರ್ಪಡಿಸಲು ಕಾನೂನಾತ್ಮಕವಾಗಿ ಸಾಧ್ಯವಿದೆ. ಇದಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿಶೇಷ ರಾಜ–ಕೀಯ ಇಚ್ಛಾಶಕ್ತಿ ಹಾಗೂ ಸಂವಿಧಾನ ತಿದ್ದುಪಡಿಯ ಅಗತ್ಯವಿರುತ್ತದೆ. ಸದ್ಯಕ್ಕೆ ವಿಜಯಪುರ ಜಿಲ್ಲೆಯು ಈ ವ್ಯಾಪ್ತಿಗೆ ಒಳಪಟ್ಟಿಲ್ಲ. ಜಿಲ್ಲೆಯಲ್ಲಿ ಉದ್ಯೋಗ, ಶಿಕ್ಷಣ ಮತ್ತು ಪ್ರಾದೇಶಿಕ ಅಭಿವೃದ್ಧಿಗಾಗಿ 371(ಜೆ) ವ್ಯಾಪ್ತಿಗೆ ತರಬೇಕೆಂಬ ವ್ಯಾಪಕ ಸಾರ್ವಜನಿಕ ಹೋರಾಟಗಳು ಮತ್ತು ಸರ್ಕಾರಕ್ಕೆ ಮನವಿಗಳು ನಿರಂತರವಾಗಿ ಸಲ್ಲಿಕೆಯಾಗುತ್ತಿವೆ. ಇದುವರೆಗೂ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಜಿಲ್ಲೆಯ ಜನತೆಗೆ ಬೇಸರ ಉಂಟಾಗಿದೆ. ಕೂಡಲೇ ಸರ್ಕಾರ ಆಸಕ್ತಿ ತೋರಿ ವಿಜಯಪುರ ಜಿಲ್ಲೆಯನ್ನು 370ಜೆ ಅಡಿಯಲ್ಲಿ ಸೇರಿಸಿ ಹೈದರಾಬಾದ್ ಕರ್ನಾಟಕ ವ್ಯಾಪ್ತಿಗೆ ಸೇ–ರಿಸಬೇಕೆಂದು ಆಗ್ರಹಿಸಿದರು.

ರಾಜ್ಯದಲ್ಲಿ ಭೀಕರ ಬರಗಾಲ ಉಂಟಾಗಿದೆ. ಬಸವನಬಾಗೇವಾಡಿ ತಾಲೂಕಿನಲ್ಲಿ ಕೂಡ ಭೀಕರ ಬರಗಾಲ ಉಂಟಾಗಿದೆ. ಇಲ್ಲಿಯವರೆಗೆ ಕೇವಲ ನೀರಾವರಿ ಅಭಿವೃದ್ಧಿ ಜಮೀನುಗಳು ಮಾತ್ರ ಬಿತ್ತನೆಯಾಗಿದೆ. ಶೇ. 70ರಿಂದ 80% ಜಮೀನು ಬಿತ್ತನೆಯಾಗಿಲ್ಲ. ತಾಲೂಕಿನ ರೈತರು ಸಂಕಷ್ಟದಲ್ಲಿದ್ದಾರೆ. ಮಳೆ ಇಲ್ಲದ ಕಾರಣ ರೈತರು ಆರ್ಥಿಕವಾಗಿ ತುಂಬಾ ಕುಗ್ಗಿದ್ದಾರೆ. ಕೂಡಲೇ ಸರ್ಕಾರ ಎಚ್ಚೆತ್ತುಕೊಂಡು ರಾಜ್ಯದ ಎಲ್ಲಾ ರೈತರ ಸಾಲವನ್ನು ಮನ್ನಾ ಮಾಡುವ ಜೊತೆಗೆ ಬೆಳೆ ಪರಿಹಾರವನ್ನು ಕನಿಷ್ಠ ಪ್ರತಿ ಹೆಕ್ಟರಿಗೆ ಒಂದು ಲಕ್ಷ ಕೊಡಬೇಕು. ರೈತರು ಈಗ ತುಂಬಿರುವ ಬೆಳೆ ವಿಮೆ ಮೊತ್ತವನ್ನು ಹೆಚ್ಚಿಸಿ ರೈತರಿಗೆ ಸಂದಾಯ ಮಾಡಬೇಕೆಂದು ಆಗ್ರಹಿಸಿದರು.

ಮನವಿ ಪತ್ರವನ್ನು ಗ್ರೇಡ್–2 ತಹಸೀಲ್ದಾರ ಎಸ್.ಎಚ್.ಅರಕೇರಿ ಸ್ವೀಕ–ರಿಸಿದರು.

ಈ ಸಂದರ್ಭದಲ್ಲಿ ರವಿ ಚಿಕ್ಕೊಂಡ, ಮಣಿಕಂಠ ಕಲ್ಲೂರ, ಸಚಿನ ಕಲ್ಲೂರ, ಸುಭಾಸ ಕಲ್ಲೂರ,ಸಚಿನ ಪವಾರ, ಮುರುಗೇಶ ಕೊಟ್ರಶೆಟ್ಟಿ, ಕುಮಾರ ಕೊಟ್ರಶೆಟ್ಟಿ, ಮುರುಗೇಶ ಮಾಲಗಾರ, ಅರುಣ ಮಾಲಗಾರ, ಸುರೇಶ ಗಾಯಕವಾಡ, ಮಲ್ಲು ಬನಾಸಿ, ಶಿವು ಬಟ್ಟಲ ಇತರರು ಇದ್ದರು.

# ಮೂರು ವಿಭಿನ್ನ ಖಂಡಗಳ ಮಹಿಳೆಯರು.. ಒಂದು ಉದ್ದೇಶ

■ ಉದಯರಶ್ಮಿ ದಿನಪತ್ರಿಕೆ

ಅದು 1885 ರ ಕಾಲ ಫಿಲಡಲ್ಫಿಯದಲ್ಲಿ ತೆಗೆದ ಆ ಚಿತ್ರದಲ್ಲಿ ಆ ಮೂರು ಜನ ಮಹಿಳಾ ವೈದ್ಯರು ಪರಸ್ಪರ ಭುಜಕ್ಕೆ ಆತುಕೊಂಡು ಪೋಸು ಕೊಟ್ಟಿದ್ದರು.

ಭಾರತದಿಂದ ವಿದೇಶಕ್ಕೆ ಪ್ರಯಾಣ ಮಾಡಿದ ಭಾರತದ ಮೊಟ್ಟ ಮೊದಲ ಮಹಿಳಾ ವೈದ್ಯೆ ಎಂಬ ಖ್ಯಾತಿಯನ್ನು ತನ್ನದಾಗಿಸಿಕೊಂಡ ಆನಂದಿಬಾಯಿ ಜೋಶಿ ಅವರಲ್ಲಿ ಒಬ್ಬರು. ಯಾವೊಬ್ಬ ತಾಯಿಯೂ ಕೂಡ ಭರಿಸಲಾರದ ಯಾತನೆಯನ್ನು ಆಕೆ ಹೊತ್ತು ದೂರದ ವಿದೇಶಕ್ಕೆ ಪ್ರಯಾಣ ಬೆಳೆಸಿದ್ದಳು. ತನ್ನ ಹದಿನಾಲ್ಕನೇ ವಯಸ್ಸಿನಲ್ಲಿ ಹುಟ್ಟಿದ ಪುಟ್ಟ ಮಗುವನ್ನು ಕಂಕುಳಲ್ಲಿ ಹೊತ್ತು ಆಕೆ ಅತ್ಯಂತ ಆರ್ತಳಾಗಿ ವೈದ್ಯಕೀಯ ಚಿಕಿತ್ಸೆಗೆ ಹಾತೊರೆದಿದ್ದಳು.. ಆದರೆ ಅಂದಿನ ದಿನಮಾನದಲ್ಲಿ ಹೆಣ್ಣು ಮಕ್ಕಳಿಗೆ ಚಿಕಿತ್ಸೆ ನೀಡಲು ಆಕೆ ವಾಸಿಸುತ್ತಿದ್ದ ಭಾಗದಲ್ಲಿ ಯಾರೂ ತಯಾರಿರಲಿಲ್ಲ. ಹಾಗೆ ತನ್ನ ಮಗುವನ್ನು ಆಕೆ ಕಳೆದುಕೊಂಡದ್ದೆ ಮುಂದೆ ಆಕೆಯ ಬದುಕಿನ ಇಂಧನವಾಗಿ ಪರಿಣಮಿಸಿತು. ತನ್ನ ಪರಿಸ್ಥಿತಿ ಮತ್ತಾವ ಮಹಿಳೆಗೂ ಬರಬಾರದು, ಯಾವೊಬ್ಬ ತಾಯಿಯು ತನ್ನ ಮಗುವಿನ ರಕ್ಷಣೆಗೆ ಕಣ್ಣೀರಿಡಬಾರದು ಎಂಬುದು ಆಕೆಯ ನಿಲುವಾಗಿತ್ತು. ಆ ಕಾರಣಕ್ಕಾಗಿ ಸಮುದ್ರ ದಾಟಿ ವಿದೇಶಕ್ಕೆ ಹೋಗಿ ಶಿಕ್ಷಣ ಪಡೆಯುವ ಆಶಯವನ್ನು ಹೊತ್ತು ಆಕೆ ಫಿಲಡೆಲ್ಫಿಯಾಗೆ ಬಂದಿದ್ದಳು.

ಆಕೆಯ ಪಕ್ಕದಲ್ಲಿ ಇದ್ದ ಇನ್ನೊಬ್ಬಾಕೆ ಒಕಾಮಿ ಎಂಬ ಜಪಾನೀ ಮಹಿಳೆ.. ಕೇವಲ ವೈದ್ಯಕೀಯವನ್ನು ಓದುವುದು ಆಕೆಯ ಆಶಯವಾಗಿರಲಿಲ್ಲ ಬದಲಾಗಿ ಹೆಣ್ಣು ಮಕ್ಕಳು ಕೂಡ ಅಷ್ಟೇ ನುರಿತ ಶಸ್ತ್ರಚಿಕಿತ್ಸಕರಾಗಬಲ್ಲರು ಎಂಬುದನ್ನು ಸಿದ್ಧಮಾಡುವ ಆಶಯವನ್ನು ಹೊತ್ತು ಆಕೆ ಅಲ್ಲಿಗೆ ಬಂದಿದ್ದಳು.

ಇವರ ಜೊತೆಗೆ ಇದ್ದಾಕೆ ಸಿರಿಯ ದೇಶದ ಸಭಾತ್ ಇಸ್ಲಾಂ ಬೌಲಿ ತನ್ನ ದೇಶಕ್ಕೆ ಆಧುನಿಕ ವೈದ್ಯಕೀಯ ಜ್ಞಾನವನ್ನು ಹೊತ್ತೊಯ್ಯಲು ಬಂದಾಕೆ.





ಮಹಿಳೆಯರಿಗಾಗಿಯೇ ಪೆನ್ಸಿಲ್ವೇನಿಯದಲ್ಲಿ ಇದ್ದ ವೈದ್ಯಕೀಯ ಕಾಲೇಜು ಅವರ ಯುದ್ಧ ಭೂಮಿಯಾಗಿತ್ತು.. ಕಾರಣ ಅಮೆ–ರಿಕಾದಂತಹ ಮುಂದುವರೆದ ದೇಶದಲ್ಲಿಯೂ ಕೂಡ ಹೆಣ್ಣು ಮಕ್ಕಳು ಅತ್ಯಂತ ಜಾಣ್ಮೆಯನ್ನು ಬಯಸುವ ವೈದ್ಯಕೀಯ ವೃತ್ತಿಯನ್ನು ಓದುವ ಸಾಮರ್ಥ್ಯ ಹೆಣ್ಣು ಮಕ್ಕಳಲ್ಲಿ ಇದೆಯೇ? ಎಂದು ಚರ್ಚಿಸುತ್ತಿದ್ದ ಕಾಲದಲ್ಲಿ ಈ ಮೂರು ಜನ ಹೆಣ್ಣು ಮಕ್ಕಳು ಅಲ್ಲಿಯ ವೈದ್ಯಕೀಯ ಕಾಲೇಜಿನಲ್ಲಿ ಕಾಪಿಟ್ಟ ಶವಗಳನ್ನು ವೈದ್ಯಕೀಯ ವಿಧಾನದಂತೆ ಕತ್ತರಿಸಿ ದೇಹದ ವಿವಿಧ ಭಾಗಗಳನ್ನು ಗುರುತಿಸಲು ಆರಂಭಿಸಿದ್ದರು. ಶಸ್ತ್ರಚಿಕಿತ್ಸೆಯ ಎಲ್ಲ ತಂತ್ರಗಳನ್ನು ಕಲಿಯುತ್ತಲೇ ಕರಗತ ಮಾಡಿಕೊಂಡಿದ್ದರು. ತಮ್ಮ ದೇಶದ ಸಾಂಪ್ರದಾಯಿಕ ಉಡ–ುಪಿನಲ್ಲಿಯೇ ಶರೀರ ರಚನಾ ಶಾಸ್ತ್ರದಲ್ಲಿ ಪಾರಂಗತರಾಗಿದ್ದರು. ಅಲ್ಲಿನ ಉಳಿದ ವಿದ್ಯಾರ್ಥಿಗಳ ಪಾಲಿಗೆ ಅವರು ಪರದೇಶದಿಂದ ಬಂದವರು.. ಅದರಲ್ಲೂ ಮಹಿಳೆಯರಾಗಿ ವೈದ್ಯಕೀಯ ಕಲಿಯಲು ಬಂದವರು ಎಂಬ ಅಸಡ್ಡೆ ಇತ್ತು. ಅವರೆಲ್ಲರ ಮುಂದೆ ಪದವಿ ಪಡೆಯುವುದು ಇವರಿಗೆ ಯಾವುದೇ ವಿಜಯೋತ್ಸವಕ್ಕೆ ಕಡಿಮೆಯಾಗಿರಲಿಲ್ಲ. ಬದಲಾಗಿ ಪದವಿ ಎಂಬುದು ಈ ಮೂರು ಜನ ವೈದ್ಯರಿಗೆ ಮೂರು ವಿಭಿನ್ನ ರೇಖೆಗಳ, ಮೂರು ವಿಭಿನ್ನ ವಿಧಿಗಳ ಹಾದಿಯನ್ನು ತೋರುವ ಆರಂಭಿಕ ಗೆರೆಯಾಗಿತ್ತು.

ಡಾಕ್ಟರ್ ಆನಂದಿಬಾಯಿ ಜೋಶಿಯವರ ಕಥೆ ಕೇಳಿದರೆ ಹೃದಯ ಹಿಂಡಿದಂತಾಗಬಹುದು. ಭಾರತದ ಮೊಟ್ಟ ಮೊದಲ ತಜ್ಞ ವೈದ್ಯರಾಗಿ ಆಕೆ ವಿದೇಶದಿಂದ ತನ್ನ ಬದುಕಿನ ಉದ್ದೇಶವನ್ನು ಪೂರೈಸಲು ಮರಳಿದರು.. ಆದರೆ ವಿಧಿಯ ಆಟವೇ ಬೇರೆಯಾಗಿ–ತ್ತು. ಆಕೆಗೆ ಟಿ ಬಿ ಎಂಬ ಕ್ಷಯದ ಮಾರಿ ಜೊತೆಯಾಗಿತ್ತು. ತನ್ನ ಕನಸನ್ನು ಸಾಕಾರಗೊಳಿಸುವ ವೈದ್ಯಕೀಯ ವೃತ್ತಿಯನ್ನು ಆರಂಭಿಸುವ ಮುನ್ನವೇ ಆಕೆ ತನ್ನ 21ನೇ ವಯಸ್ಸಿನಲ್ಲಿ ತೀವ್ರ ಕ್ಷಯ ರೋಗಕ್ಕೆ ಬಲಿಯಾದಳು.

ಒಕಾಮಿ ತನ್ನ ದೇಶ ಜಪಾನ್ ಗೆ ಮರಳಿದಳು. ತನ್ನ ದೇಶದ ಒಂದಿಡೀ ಹೆರಿಗೆ ಇಲಾಖೆಯನ್ನು ಆಕೆ ಮುನ್ನಡೆಸಿದಳು. ಬದುಕಿನಲ್ಲಿ ತಾನು ಏನಾಗಬೇಕೆಂದು ಬಯಸಿದ್ದಳೋ ಅದನ್ನು ಸಂಪೂರ್ಣವಾಗಿ ಈಡೇರಿಸಿಕೊಳ್ಳಲು ಆಕೆಗೆ ಸಾಧ್ಯವಾಯಿತು.. ಆದರೆ ಜಪಾನ್ ದೇಶದ ಚಕ್ರವರ್ತಿ ಆಕೆಯನ್ನು ಭೇಟಿಯಾಗಲು ನಿರಾಕರಿಸಿದ. ಕಾರಣವೇನು ಗೊತ್ತೆ?.. ಆಕೆ ಮಹಿಳೆ ಎಂಬ ಏಕೈಕ ಕಾರಣಕ್ಕೆ ಆತ ಆಕೆಯನ್ನು ಭೇಟಿಯಾಗಲು ಒಪ್ಪಲಿಲ್ಲ. ಆಕೆಯ ವಿರುದ್ಧದ ಎಲ್ಲಾ ಪ್ರತಿಭಟನೆಗಳ ವಿರುದ್ಧ ಆಕೆ ಯಾವುದೇ ರಾಜಿಗೊಳಗಾಗದೆ ತನ್ನ ಆತ್ಮ ಗೌರವವನ್ನು ಕಾಯ್ದುಕೊಂಡಳು.

ಸಿರಿಯಾದ ಇಸ್ಲಾಂ ಬೌಲಿ.. ತನ್ನ ಬದುಕಿನದ್ದಕ್ಕೂ ವೈದ್ಯಕೀಯ ಸೇವೆ ಸಲ್ಲಿಸಿದಳು. ಆಟೋಮನ್ ಸಾಮ್ರಾಜ್ಯದ ಎಲ್ಲಾ ಕಡೆ ಆಕೆ ತಿರುಗಾಡಿ ಚಿಕಿತ್ಸೆ ನೀಡಿದಳು. ದಮಾಸ್ಕಸ್ ನಿಂದ ಕೈರೋದವರೆಗೆ ಆಕೆ ಹಲವಾರು ದಶಕಗಳ ಕಾಲ ಜನರ ರೋಗಗಳಿಗೆ ಚಿಕಿತ್ಸೆ ನೀಡುತ್ತಾ ಸಾವಿರಾರು ಜನರನ್ನು ಆರೋಗ್ಯ ಸಮಸ್ಯೆಗಳಿಂದ ಪಾರು ಮಾಡಿದಳು. 1941ರವರೆಗೆ ಆಕೆ ನುರಿತ ತಜ್ಞವೈದ್ಯೆಯಾಗಿ ಕಾರ್ಯನಿರ್ವಹಿಸಿದಳು.

ಮೂರು ಜನ ಮಹಿಳೆಯರು, ಮೂರು ವಿಭಿನ್ನ ಖಂಡಗಳು,






ವೀಣಾ ಹೇಮಂತ್ ಗೌಡ ಪಾಟೀಲ್.
ಮುಂಡರಗಿ – ಗದಗ

ಮೂರು ವಿಭಿನ್ನ ಸಾಂಪ್ರದಾಯಿಕ ಹಿನ್ನೆಲೆಯ ಬದುಕಿನ ಯುವತಿಯರು.. ಆದರೆ ಮೂವರ ಉದ್ದೇಶ ಒಂದೇ ಆಗಿತ್ತು. ಆ ಮೂವರನ್ನು ಕೇವಲ ಒಂದು ಫ್ರೇಮ್ ನಲ್ಲಿ ಹಿಡಿದಿಟ್ಟ ಅತ್ಯಂತ ವಿರಳವಾದ ಚಿತ್ರ ಅವರ ಬದುಕಿನ ಕಥೆಯನ್ನು ಹೇಳುತ್ತದೆ.. ಆ ಮೂರು ಜನ ಮಹಿಳೆಯರು ಅಸಾಧ್ಯ ಎಂಬುದನ್ನು ಸಾಧಿಸಿ ತೋ–ರಿಸಿದ್ದು ಹೆಣ್ಣು ಮಕ್ಕಳಿಗೆ ಮತದಾನದ ಹಕ್ಕು ನೀಡುವ ಮುನ್ನವೇ, ಹೆಣ್ಣು ಮಕ್ಕಳನ್ನು ಈ ಜಗತ್ತು ನಂಬುವ ಮುನ್ನವೇ ಎಂಬುದು ಅತ್ಯಂತ ಹೆಮ್ಮೆಯ ವಿಷಯ.

ಡ್ರೆಕ್ಸೆಲ್ ವಿಶ್ವವಿದ್ಯಾಲಯದವರು ಬಿಡುಗಡೆ ಮಾಡಿದ ಈ ಚಿತ್ರ ಆ ಮೂವರು ಮಹಿಳೆಯರ ಅಸೀಮ ಸಾಧನೆಯ

ಹೆಜ್ಜೆ ಗುರುತುಗಳ ದಾಖಲೆಯಾಗಿದೆ ಎಂದರೆ ತಪ್ಪಿಲ್ಲ.






# ಕ್ಯಾಂಪಸ್ ಸಂದರ್ಶನ: ಬಿಎಲ್ಡಿಇ ಕಾಲೇಜಿನ 19 ವಿದ್ಯಾರ್ಥಿಗಳು ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಏಕಸ್ ಎರೊಸ್ಪೇಸ್ ಸಂಸ್ಥೆ ಸೆಪ್ಟೆಂಬರ್ 10 ಮತ್ತು 11 ರಂದು ನಗರದಲ್ಲಿ ನಡೆಸಿದ ಕ್ಯಾಂಪಸ್ ಸಂದರ್ಶನದಲ್ಲಿ ನಗರದ ಬಿ.ಎಲ್.ಡಿ.ಇ ಸಂಸ್ಥೆಯ ವಚನಪಿತಾಮಹ ಡಾ. ಫ. ಗು. ಹಳಕಟ್ಟಿ ಎಂಜಿನಿಯರಿಂಗ್ ಕಾಲೇಜಿನ 19 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ಉತ್ತರ ಕರ್ನಾಟಕದ ವಿಜಯಪುರ, ಬಾಗಲಕೋಟೆ, ಬೆಳಗಾವಿ, ಧಾರವಾಡ, ಕಲಬುರಗಿ, ಬೀದರ, ಯಾದಗಿರಿ ಸೇರಿದಂತೆ ನಾನಾ ಜಿಲ್ಲೆಗಳ ಒಟ್ಟು 280 ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿಗಳು ಈ ಕ್ಯಾಂಪಸ್ ಸಂದರ್ಶನದಲ್ಲಿ ಪಾಲ್ಗೊಂಡಿದ್ದರು. ಅವರಲ್ಲಿ 19 ಯುವಕರು ಆಯ್ಕೆಯಾಗಿದ್ದು, ಎಲ್ಲ ಯುವಕರು ಬಿ.ಎಲ್.ಡಿ.ಇ ಎಂಜಿನಿಯರ್ ಕಾಲೇಜಿನ ಮೆಕ್ಯಾನಿಕಲ್ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳಾಗಿರುವುದು ಗಮನಾರ್ಹವಾಗಿದೆ. ಆಯ್ಕೆಯಾದ ಎಲ್ಲ ವಿದ್ಯಾರ್ಥಿಗಳಿಗೆ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷ ಮತ್ತು ಸಚಿವ ಎಂ. ಬಿ. ಪಾಟೀಲ, ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ, ಬಿ.ಎಲ್.ಡಿ.ಇ ಡೀಮ್ಡ್ ವಿವಿ ರಜಿಸ್ಟ್ರಾರ ಡಾ. ಆರ್. ವಿ. ಕುಲಕರ್ಣಿ, ಕಾಲೇಜಿನ ಪ್ರಾಚಾರ್ಯ ಡಾ. ಮಂಜುನಾಥ ಪಿ., ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ರಮೇಶ ಜಿರಗಾಳ ಅಭಿನಂದನೆ ಸಲ್ಲಿಸಿದ್ದಾರೆ.

# ತಂತ್ರಜ್ಞಾನ ಸ್ಪರ್ಶದೊಂದಿಗೆ ವಿಶ್ವ ಪ್ರವಾಸೋದ್ಯಮ ದಿನಾಚರಣೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ವಿಶ್ವ ಪ್ರವಾಸೋದ್ಯಮ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ, ಹಾಗೂ ವಿವಿಧ ಇಲಾಖೆ– ಸಂಸ್ಥೆಗಳ ಜಂಟಿ ಸಹಯೋಗದೊಂದಿಗೆ ಆಯೋಜಿಸಲಾಗಿರುವ ವಿಶೇಷ ಕಾರ್ಯಕ್ರಮಗಳ ವಿಷಯ ಸೂಚಿ ಹೊಂದಿರುವ ಕರಪತ್ರವನ್ನು ಜಿಲ್ಲಾಧಿಕಾರಿ ಡಾ. ಆನಂದ.ಕೆ ಅವರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸೋಮವಾರ ಬಿಡುಗಡೆಗೊಳಿಸಿದರು.

ಈ ಬಾರಿಯ ವಿಶ್ವ ಪ್ರವಾಸೋದ್ಯಮ ದಿನವನ್ನು "ಡಿಜಿಟಲ್ ಕಾರ್ಯಸೂಚಿ ಮತ್ತು ಕೃತಕ ಬುದ್ಧಿಮತ್ತೆ ಬಳಸಿ ಪ್ರವಾಸೋದ್ಯಮದ ಮರುಸೃಷ್ಟಿ ಎಂಬ ಘೋಷ ವಾಕ್ಯದೊಂದಿಗೆ ಆಚರಿಸಲಾಗುತ್ತಿದ್ದು, ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳನ್ನು ಉತ್ತೇಜಿಸಲು ಹಲವು ಸ್ಪರ್ಧೆಗಳು ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಈ ಕರಪತ್ರ ಬಿಡುಗಡೆ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಿಷಿ ಆನಂದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ, ವಿಜಯಪುರ ಉಪ ವಿಭಾಗಾಧಿಕಾರಿ ಜುಫಿಶಾನ್ ಹಕ್ ಸೇರಿದಂತೆ ಪೀಟರ್ ಅಲೆಕ್ಸಾಂಡರ್, ಅಮೀನ ಹುಲ್ಲೂರ, ರಮೇಶ ಚವ್ಹಾಣ, ಪ್ರವಾಸೋದ್ಯಮ ಸಮಾಲೋಚಕರಾದ ಅನಿಲಕುಮಾರ ಬಣಜಿಗೇರ ಉಪಸ್ಥಿತರಿದ್ದರು.

ಈ ಆಚರಣೆಯ ಭಾಗವಾಗಿ ಜಿಲ್ಲೆಯ ಪ್ರವಾಸಿ ತಾಣಗಳು ಹಾಗೂ ಸಾಂಸ್ಕೃತಿಕ ಹಿನ್ನೆಲೆಯನ್ನು ಬಿಂಬಿಸುವ 2 ನಿಮಿಷಗಳ ಕಿರುಚಿತ್ರ ಸ್ಪರ್ಧೆಯನ್ನು ಸಾರ್ವಜನಿಕ–ರಿಗಾಗಿ ಆಯೋಜಿಸಲಾಗಿದೆ.

ಈಗಾಗಲೇ ಸೆ.20 ರಿಂದ ಆರಂಭವಾಗಿದ್ದು, ಸೆ.25ರ ಸಾಯಂಕಾಲ 4 ಗಂಟೆಯವರೆಗೆ ನಡೆಯುವ ಈ ಸ್ಪರ್ಧೆಯಲ್ಲಿ ಸಾರ್ವಜನಿಕರು ತಮ್ಮ ವೀಡಿಯೊಗಳನ್ನು ಇಮೇಲ್ ಮೂಲಕ ಸಲ್ಲಿಸಬಹುದಾಗಿದೆ. ಅತ್ಯುತ್ತಮ ವೀಡಿಯೊಗಳಿಗೆ ಆಕರ್ಷಕ ಬಹುಮಾನಗಳನ್ನು ನೀಡಲಾಗುವುದು.

ಇದರ ಜೊತೆಗೆ ಬಿ.ಎಲ್.ಡಿ.ಇ ಅಸೋಶಿಯೇಷನ್ ಫ.ಗು.ಹಳಕಟ್ಟಿ ಇಂಜಿನಿಯರಿಂಗ್ ಹಾಗೂ ತಂತ್ರಜ್ಞಾನ ಕಾಲೇಜಿನ ಸಹಯೋಗದೊಂದಿಗೆ ಆರ್ಕಿಟೆಕ್ಟ್ ವಿದ್ಯಾರ್ಥಿಗಳಿಗಾಗಿ ಸೆ. 21 ರಿಂದ 25 ರ ಮಧ್ಯಾಹ್ನ 3.ಗಂಟೆಯವರೆಗೆ ಕೃತಕ ಬುದ್ಧಿಮತ್ತೆಯ ಮೂಲಕ ಪ್ರವಾಸಿ ತಾಣಗಳ ಮರುಪರಿಲ್ಪನೆ ವಿಷಯದ ಮೇಲೆ ವಿಶೇಷ ಪೋಸ್ಟರ್ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ.

ಐತಿಹಾಸಿಕ ನಗರಿಯ ಸ್ವಚ್ಛತೆ ಮತ್ತು ಪರಂಪರೆಯ ಅರಿವು ಮೂಡಿಸುವ ನಿಟ್ಟಿನಲ್ಲಿ ಸೆ. 25 ರಂದು ಬೆಳಿಗ್ಗೆ 8 ಗಂಟೆಗೆ ಆನಂದ ಮಹಲ್‌ನಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಅದರಂತೆ, ಸೆ. 26 ರಂದು ಬೆಳಿಗ್ಗೆ 8 ಗಂಟೆಗೆ ಕೆ.ಎಸ್.ಟಿ.ಡಿ.ಸಿ ಹೋಟೆಲ್ ಆವರಣದಿಂದ ಆರಂಭವಾಗಿ ಗಗನ್ ಮಹಲ್, ಆನಂದ ಮಹಲ್, ಸಾತ್ ಮಂಜಿಲ್ ಮತ್ತು ಜೋಡಗುಮ್ಮಟ ಮೂಲಕ ತಾಜಬಾವಡಿಯವರೆಗೆ 'ಹೆರಿಟೇಜ್ ವಾಕ್' (ಪರಂಪರೆ ನಡಿಗೆ) ನಡೆಯಲಿದೆ.

ಪ್ರವಾಸೋದ್ಯಮದಲ್ಲಿ ತಂತ್ರಜ್ಞಾನದ ಬಳಕೆಗೆ ಉತ್ತೇಜನ ನೀಡುವ ಭಾಗವಾಗಿ, ಬಿ.ಎಲ್.ಡಿ.ಇ ಸಂಸ್ಥೆಯ ಇಂಜಿನೀಯರಿಂಗ್ ಕಾಲೇಜ್ ವಿಭಾಗದ ಸಹಯೋಗದೊಂದಿಗೆ ವಿಜಯಪುರ ಜಿಲ್ಲೆಯ ಪ್ರವಾಸಿ ತಾಣಗಳ ಸಮಗ್ರ ಮಾಹಿತಿ ನೀಡುವ 'ಎಐ ಆಧಾರಿತ ಆಪ್ಸ್' 2026ರ ಸೆ.27 ರಂದು ಬೆಳಿಗ್ಗೆ 10.30 ಕ್ಕೆ ಇಬ್ರಾಹಿಂ ರೋಜಾದಲ್ಲಿ ಬಿಡುಗಡೆ ಮಾಡಲಾಗುವುದ.

ಅದೇ ದಿನ ನೂತನ ಫೋಟೋಗ್ರಫಿ ಅಸೋಸಿಯೇಷನ್ ಇವರ ವತಿಯಿಂದ ಛಾಯಾಗ್ರಹಣ ಸ್ಪರ್ಧೆ ಮತ್ತು ಪ್ರದರ್ಶನವೂ ನಡೆಯಲಿದೆ.

ಸೆಪ್ಟೆಂಬರ್.25 ರಂದು ಬೆಳಿಗ್ಗೆ 10.30 ರಿಂದ ಸಂಜೆ 4ಗಂಟೆಯವರೆಗೆ ಇಬ್ರಾಹಿಂ ರೋಜಾ ಆವರಣದಲ್ಲಿ ಜಿಲ್ಲೆಯ ಕಲಾವಿದರಿಗಾಗಿ ವಿಶೇಷ ಚಿತ್ರಕಲಾ ಶಿಬಿರವನ್ನು ಆಯೋಜಿಸಲಾಗಿದ್ದು, ವಿಜೇತರಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಗುವುದು.

ಈ ಎಲ್ಲ ಕಾರ್ಯಕ್ರಮಗಳಲ್ಲಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆಯೂ ಹಾಗೂ ಕಾರ್ಯಕ್ರಮಗಳ ಹೆಚ್ಚಿನ ಮಾಹಿತಿಗಾಗಿ ಮೊ: 9886373006 ಹಾಗೂ 9731813227 ಅಥವಾ 9481940132 ಸಂಪರ್ಕಿಸಿ ಬಹುದಾಗಿದೆ ಎಂದು

ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರಾದ ಅರವಿಂದ ಹೂಗಾರ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.



# ಶಾಲೆಯ ಕೆಲಸ ನನ್ನ ಮನೆಯ ಕೆಲಸದಂತೆ :ಮೇತ್ರಿ

■ ಉದಯರಶ್ಮಿ ದಿನಪತ್ರಿಕೆ

**ಎಸ್‌ಡಿಎಂಸಿ ಅಧ್ಯಕ್ಷರಾಗಿ ಗುರುಬಾಳ ಮೇತ್ರಿ, ಉಪಾಧ್ಯಕ್ಷರಾಗಿ ಪರವಿನಾ ಅಂಗಡಿ ಆಯ್ಕೆ**

ಚಡಚಣ: ತಾಲೂಕಿನ ಬರಡೋಲ ಗ್ರಾಮದ ಜಂಗಲಗಿ ವಸ್ತಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (ಎಸ್‌ಡಿಎಂಸಿ) ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ಸೋಮವಾರ ನಡೆಯಿತು.


ಸರ್ವಾನುಮತದಿಂದ ಗುರುಬಾಳ ದು. ಮೇತ್ರಿ ಅವರನ್ನು ಎಸ್‌ಡಿಎಂಸಿ ಅಧ್ಯಕ್ಷರಾಗಿ ಹಾಗೂ ಶ್ರೀಮತಿ ಪರವಿನಾ ಅಂಗಡಿ ಅವರನ್ನು ಉಪಾಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು.

ನೂತನ ಅಧ್ಯಕ್ಷ ಗುರುಬಾಳ ಮೇತ್ರಿ ಮಾತನಾಡಿ, "ಶಾಲೆಯ ಅಭಿವೃದ್ಧಿ ಕಾರ್ಯಗಳನ್ನು ನನ್ನ ಮನೆಯ ಕೆಲಸದಂತೆ ಪರಿಗಣಿಸಿ ಪ್ರಾಮಾಣಿಕವಾಗಿ ನಿರ್ವಹಿಸುತ್ತೇನೆ. ಶಾಲೆಯ ಶೈಕ್ಷಣಿಕ ಪ್ರಗತಿಗೆ ಅಗತ್ಯವಿರುವ ಎಲ್ಲ ರೀತಿಯ ಸಹಕಾರ ನೀಡುತ್ತೇನೆ" ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸಿದ್ರಾಮ ಮಾಲಗಾರ, ಶಿವಪ್ಪ ಜಂಗಲಗಿ, ಜಕ್ಕಪ್ಪ ಮೇತ್ರಿ, ಶ್ರೀಶೈಲ ಜಂಗಲಗಿ, ಗಣಪತಿ ನಂದೂರ, ಶ್ರೀಶೈಲ ಬನಸೋಡೆ ಸೇರಿದಂತೆ ಗ್ರಾಮದ ಹಿರಿಯರು ಹಾಗೂ ಶಾಲೆಯ ಹಿತೈಷಿಗಳು ಉಪಸ್ಥಿತರಿದ್ದರು.

# ಸ್ಟಾರ್ಟ್ ಅಪ್ ಗಳಿಂದ ನವ್ಯೋದ್ಯಮಿಗಳಿಗೆ ಪ್ರೋತ್ಸಾಹ :ಸುಜಯ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದ ಶ್ರೀ ಬಿ. ಎಂ. ಪಾಟೀಲ ಫೌಂಡೇಶನ್ ಫಾರ್ ಇನ್ನೊವೇಶನ್ ಆಂಡ್ ಇನಕ್ಯೂಬೇಶನ್ ಸೆಂಟರ್ ಜಿಲ್ಲೆಯ ಸ್ಟಾರ್ಟ್ ಅಪ್ ಗಳು, ವಿದ್ಯಾರ್ಥಿ ನವ್ಯೋದ್ಯಮಿಗಳು ಹಾಗೂ ಉದ್ಯಮಿಗಳಿಗೆ ಪ್ರೋತ್ಸಾಹ ನೀಡುತ್ತಿದ್ದು, ಸೆಂಟರ್ ನ ಕೆಲಸ ಕಾರ್ಯಗಳಿಗೆ ಕರ್ನಾಟಕ ಡಿಜಿಟಲ್ ಎಕನಾಮಿಕ್ ಮಿಶನ್ ಬೆಂಬಲವಾಗಿ ನಿಲ್ಲಲಿದೆ ಎಂದು ಮಿಶನ್ ನ ಕಲ್ಯಾಣ ಕರ್ನಾಟಕ ಕ್ಲಸ್ಟರ್ ಹೆಡ್ ಸುಜಯ ಮುದಗಲ ಹೇಳಿದ್ದಾರೆ.

ರವಿವಾರ ನಗರದಲ್ಲಿರುವ ಶ್ರೀ ಬಿ. ಎಂ. ಪಾಟೀಲ ಫೌಂಡೇಶನ್ ಫಾರ್ ಇನ್ನೊವೇಶನ್ ಆಂಡ್ ಇನಕ್ಯೂಬೇಶನ್ ಸೆಂಟರ್ ಗೆ ಭೇಟಿ ನೀಡಿದ ಅವರು ವಿದ್ಯಾರ್ಥಿಗಳು, ನವ್ಯೋದ್ಯಮಿಗಳು ಹಾಗೂ ಉದ್ಯಮಿಗಳೊಂದಿಗೆ ಸಂವಾದ ನಡೆಸಿದರು.

ರಾಜ್ಯದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನೀತಿಗಳು, ನಾನಾ ಯೋಜನೆಗಳು ಹಾಗೂ ಕಾರ್ಯಕ್ರಮಗಳ ಕುರಿತು ಇದೇ ವೇಳೆ ಚರ್ಚೆ ನಡೆಸಿದ ಅವರು, ಜಿಲ್ಲೆಯಲ್ಲಿ ನವೋದ್ಯಮ ಪರಿಸರವನ್ನು ಮತ್ತಷ್ಟು ಬಲಪಡಿಸಲು ಅಗತ್ಯವಿರುವ ಅಂಶಗಳ ಕುರಿತು ಸ್ಟಾರ್ಟ್‌ಅಪ್‌ಗಳ ಸಂಸ್ಥಾಪಕರು ತಮ್ಮ ಅಭಿಪ್ರಾಯಗಳು ಮತ್ತು ಅಗತ್ಯಗಳನ್ನು ವಿವರಿಸಿದರು. ಮೂಲಸೌಕರ್ಯ, ಮಾರ್ಗದರ್ಶನ, ಹಣಕಾಸುಮತ್ತುಅನುದಾನ, ಮಾರುಕಟ್ಟೆಸಂಪರ್ಕಹಾಗೂ ಕೈಗಾರಿಕಾ ಸಹಭಾಗಿತ್ವ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆ ನಡೆಯಿತು. ಜಿಲ್ಲೆಯ ಶೈಕ್ಷಣಿಕ ಸಂಸ್ಥೆಗಳು, ಸ್ಟಾರ್ಟ್‌ಅಪ್‌ಗಳು ಹಾಗೂ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನಡುವೆ ಸಹಭಾಗಿತ್ವವನ್ನು ಹೆಚ್ಚಿಸುವ ಅಗತ್ಯಕ್ಕೂ ಒತ್ತು ನೀಡಲಾಯಿತು. ಇದರ ಮೂಲಕ ವಿದ್ಯಾರ್ಥಿಗಳಲ್ಲಿ ನವೀನ ಆಲೋಚನೆಗಳಿಗೆ ಉತ್ತೇಜನ ನೀಡುವುದರ ಜೊತೆಗೆ, ಸ್ಟಾರ್ಟ್‌ಅಪ್‌ಗಳು ಮತ್ತು ಕೈಗಾರಿಕೆಗಳಿಗೆ ಯುವ ಪ್ರತಿಭೆ, ಹೊಸ ಆಲೋಚನೆಗಳು ಹಾಗೂ ತಂತ್ರಜ್ಞಾನದೊಂದಿಗೆ ಸಂಪರ್ಕ ಕಲ್ಪಿಸಲು ಅವಕಾಶ ದೊರೆಯಲಿದೆ.

ಈ ನಿಟ್ಟಿನಲ್ಲಿ ಪ್ರತಿ ಶನಿವಾರ ಶ್ರೀ ಬಿ. ಎಂ. ಪಾಟೀಲ್ ಫೌಂಡೇಶನ್ ಫಾರ್ ಇನ್ನೋವೇಶನ್‌ಂಡ್

ಇನ್‌ಕ್ಯುಬೇಶನ್ ಸೆಂಟರ್ ನಲ್ಲಿ ಸ್ಟಾರ್ಟ್‌ಅಪ್ ಮತ್ತು ನವೋದ್ಯಮ ಸಭೆಗಳನ್ನು ಆಯೋಜಿಸಲಾಗುವುದು. ಈ ಸಭೆಗಳು ಸ್ಟಾರ್ಟ್‌ಅಪ್ ಸಂಸ್ಥಾಪಕರು, ವಿದ್ಯಾರ್ಥಿಗಳು, ನವೋದ್ಯಮಿಗಳು ಹಾಗೂ ಉದ್ಯಮಿಗಳು ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲು, ಸಂಪರ್ಕ ಬೆಳೆಸಲು ಮತ್ತು ಸಹಭಾಗಿತ್ವದ ಅವಕಾಶಗಳನ್ನು ಅನ್ವೇಷಿಸಲು ವೇದಿಕೆಯಾಗಲಿವೆ. ಕೆಡಿಇಎಂ,ಬಿ. ಎಂ. ಪಾಟೀಲ್ ಫೌಂಡೇಶನ್ ಫಾರ್ ಇನ್ನೋವೇಶನ್‌ಂಡ್ ಇನ್‌ಕ್ಯುಬೇಶನ್,

ಶೈಕ್ಷಣಿಕ ಸಂಸ್ಥೆಗಳು, ಸ್ಟಾರ್ಟ್‌ಅಪ್‌ಗಳು ಹಾಗೂ ಕೈಗಾರಿಕೆಗಳ ನಡುವಿನ ನಿರಂತರ ಸಹಭಾಗಿತ್ವದ ಮೂಲಕ ವಿಜಯಪುರದಲ್ಲಿ ಬಲಿಷ್ಠ ನವೋದ್ಯಮ ಪರಿಸರ ನಿರ್ಮಾಣಕ್ಕೆ ಉತ್ತೇಜನ ದೊರೆಯಲಿದೆ. ಇದರ ಮೂಲಕ ಜಿಲ್ಲೆಯ ಯುವ ನವೋದ್ಯಮಿಗಳು ಹಾಗೂ ಉದ್ಯಮಿಗಳಿಗೆ ರಾಜ್ಯದ ನಾನಾ ಯೋಜನೆಗಳು, ಅನುದಾನಗಳು, ಮಾರ್ಗದರ್ಶನ ಮತ್ತು ಮಾರುಕಟ್ಟೆ ಅವಕಾಶಗಳೊಂದಿಗೆ ಸಂಪರ್ಕ ಸಾಧಿಸಲು ಹೆಚ್ಚಿನ ಅವಕಾಶಗಳು ಲಭ್ಯವಾಗಲಿವೆ. ವಿಜಯಪುರವನ್ನು ನವೋದ್ಯಮ ಮತ್ತು ಉದ್ಯಮಶೀಲತೆಯ ಪ್ರಮುಖ ಕೇಂದ್ರವಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈ ಪ್ರಯತ್ನ ಮಹತ್ವದ ಹೆಜ್ಜೆಯಾಗಲಿದೆ.

ಈ ಸಂದರ್ಭದಲ್ಲಿ ಸೆಂಟರ್ ಪ್ರತಿನಿಧಿಗಳಾದ ಆಶೀಶ ಕುಲಕರ್ಣಿ, ಸಹನಾ ಬಿರಾದಾರ ಮುಂತಾದವರು ಉಪಸ್ಥಿತರಿದ್ದರು.

# ಕೊಲ್ಹಾರದಲ್ಲಿ ಅದ್ದೂರಿಯಾಗಿ ಗಣೇಶ ವಿಸರ್ಜನೆ

■ ಉದಯರಶ್ಮಿ ದಿನಪತ್ರಿಕೆ



ಕೊಲ್ಹಾರ: ಪಟ್ಟಣದ ಮಲ್ಲಿಕಾರ್ಜುನ ಗಜಾನನ ಮಂಡಳಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿಯ ವಿಸರ್ಜನೆ ಮಂಗಳವಾರ ಭಕ್ತಿ ಹಾಗೂ ಸಂಭ್ರಮದ ವಾತಾವರಣದಲ್ಲಿ ನೆರವೇರಿತು. ಗಣೇಶೋತ್ಸವದ ಅಂಗವಾಗಿ ಮಂಡಳಿಯಿಂದ ಪ್ರತಿದಿನ ವಿಶೇಷ ಪೂಜೆ, ಅನ್ನಸಂತರ್ಪಣೆ ಸೇರಿದಂತೆ ಹಲವು ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಹುಬ್ಬಳ್ಳಿ ವಿಜಯಪುರದ ಘನಲಿಂಗ ಸ್ವಾಮೀಜಿ ಅವರಿಂದ ವಿಶೇಷ ಪ್ರವಚನ ಕಾರ್ಯಕ್ರಮ ನಡೆಯಿತು.

ವಿವಿಧ ಸಾಂಸ್ಕೃತಿ–ಕ ಸ್ಪರ್ಧೆಗಳನ್ನು ಆಯೋಜಿಸಿ, ವಿಜೇತರಿಗೆ ಬಹುಮಾನ ವಿತ–ರಿಸಲಾಯಿತು.

ಮಂಗಳವಾರ ನಡೆದ ಗಣೇಶ ಮೂರ್ತಿಯ ವಿಸರ್ಜನಾ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗಿತು. ಡಿಜೆ ಸಂಗೀತದ ತಾಳಕ್ಕೆ ಮಹಿಳೆಯರು, ಯುವಕರು ಹಾಗೂ ಭಕ್ತರು ಹೆಜ್ಜೆ ಹಾಕಿ ಸಂಭ್ರಮಿಸಿದರು. ಬಳಿಕ ಕೃಷ್ಣಾ ನದಿಯಲ್ಲಿ ಗಣೇಶ ಮೂರ್ತಿಯನ್ನು ಸಂಪ್ರದಾಯಬದ್ಧವಾಗಿ ವಿಸರ್ಜಿಸಲಾಯಿತು.

ಮೆರವಣಿಗೆಯಲ್ಲಿ ಸಿದ್ದಪ್ಪ ಸೊನ್ನದ, ಶೇಕಪ್ಪ ಗಾಣಗೇರ, ಈರಣ್ಣ ಉಗ್ರಾಣ, ಸಂತೋಷ ಹಡ್ರೋಳ್ಳಿ, ಬಸವರಾಜ ಬಾಲಗೊಂಡ, ಆನಂದ ಉಳ್ಳಾಗಡ್ಡಿ, ಸಂಗಪ್ಪ ಬರಗಿ, ಕಲ್ಲಪ್ಪ ದಳವಾಯಿ ಸೇರಿದಂತೆ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರೆ ಭಾಗವಹಿಸಿದ್ದು ವಿಶೇಷವಾಗಿತ್ತು

# ಆರ್ಥಿಕ ಸದೃಢತೆಗೆ ಸಹಕಾರ ಸಂಘ ಬಲಪಡಿಸಿ :ಅಮರಗೊಂಡ

■ ಉದಯರಶ್ಮಿ ದಿನಪತ್ರಿಕೆ



ಆಲಮೇಲ: ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘಗಳು ( ಪಿಕೆಪಿಎಸ್ ) ರೈತರ ಜೀವನಾಡಿಯಾಗಿದ್ದು. ರೈತರ ಆರ್ಥಿಕ ಸದೃಢತೆಗೆ ಸಹಕಾರ ಸಂಘಗಳನ್ನು ಮತ್ತಷ್ಟು ಬಲಪಡಿಸಬೇಕು ಎಂದು ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸರಕಾರ ಸಂಘದ ಅಧ್ಯಕ್ಷ ನಾಗಪ್ಪ ಅಮರಗೊಂಡ ಹೇಳಿದರು.

ಆಲಮೇಲ ಪಟ್ಟಣದ ಶ್ರೀ ವಿಶ್ವೇಶ್ವರ ಸಭಾಭವನದಲ್ಲಿ 2025–26 ನೇ ಸಾಲಿನ (119) ನೇ ವಾರ್ಷಿಕ ಸರ್ವ ಸಾಧಾರಣ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ರಾಮೀಣ ಭಾಗದ ರೈತರ ಆರ್ಥಿಕ ಚಟುವಟಿಕೆಗಳಿಗೆ ಪಿಕೆಪಿಎಸ್ ಪ್ರಮುಖ ಸಹಕಾರ ನೀಡುತ್ತಿವೆ. ಕೃಷಿ ಚಟುವಟಿಕೆಗಳಿಗೆ ಅಗತ್ಯವಿರುವ ಸಾಲ ಸೌಲಭ್ಯ ಉಳಿತಾಯ ಸೇರಿದಂತೆ ವಿವಿಧ ಸೇವೆಗಳನ್ನು ರೈತರು ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಎಂ ಎಸ್ ಜಯವಡಗಿ ನಿರ್ದೇಶಕರು ಕ್ಷೇತ್ರ ಅಧಿಕಾರಿಗಳು, ವಿಡಿಸಿಸಿ ಬ್ಯಾಂಕ್ ಅಲಮೇಲ ಹಾಗೂ ಭಾಗಣ್ಣ ಗುರುಕಾರ ಚಾಲನೆ ನೀಡಿ ಮಾತನಾಡಿ, ರೈತರು ಹೆಚ್ಚಿನ ಸಂಖ್ಯೆಯಲ್ಲಿ ಶೇರು ಸದಸ್ಯರಾಗುವುದರ ಜೊತೆಗೆ ಸಂಘದೊಂದಿಗೆ ನಿರಂತರವಾಗಿ ವ್ಯವಹಾರ ನಡೆಸಿದರೆ ಸಂಸ್ಥೆ ವ್ಯವಹಾರ ವಿಸ್ತಾರಗೊಂಡು ಮುಂದಿನ ದಿನಗಳಲ್ಲಿ ರೈತರಿಗೆ ಇನ್ನಷ್ಟು ಉತ್ತಮ ಸೇವೆ ಒದಗಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ವಸ್ತಾದ್ ಜಮಾದಾರ, ಭೀಮಾಶಂಕರ ಬಂಡಗಾರ, ಮೈಬು ಮಸಳಿ, ಬಾಬು ಕೊತ್ತಂಬರಿ, ಸಿದ್ದಪ್ಪ ಹವಳಗಿ, ಪ್ರತಿನಿಧಿಯಾಗಿ ಸಿದ್ದು ಕೋಳಾರಿ, ಶ್ರೀಮತಿ ಚಂದಮ್ಮ ಗುರುಕಾರ, ಪಂಚಯ್ಯ ರಾಂಪುರಮಠ, ಶಶಿಧರ ನಾಯ್ಕೋಡಿ, ಪ್ರಮೋದ್ ಕೋಳೂರು ಸೇರಿದಂತೆ ಹಲವರಿದ್ದರು. ಅಪ್ಪು ಶೆಟ್ಟಿ ನಿರೂಪಿಸಿದರು. ಹಳಿಮನಿ ಶಿಕ್ಷಕರು ಸ್ವಾಗತಿಸಿದರು.

# ಶಾಂತಿ–ಸದ್ಭಾವದ ಸಂದೇಶ ಸಾರಿದ್ದ ಹಜರತ್ ಗೌಸ್ ಪಾಕ್

## ವಿಜಯಪುರದಲ್ಲಿ ಅರ್ಕಾಟ್ ದರ್ಗಾ ಉರುಸು ಹಾಗೂ ಹಜರತ್ ಗೌಸ್-ಏ ಆಜಂ ಸ್ಮರಣೆ ಪ್ರಯುಕ್ತ ಭವ್ಯ ಸದ್ಭಾವನಾ ಯಾತ್ರೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮಾನವೀಯತೆಯ ತತ್ವಗಳನ್ನು ಸಾರಿದ ಹಜರತ್ ಗೌಸ್ ಏ ಅಜಂ ಅವರ ಸ್ಮರಣೆ ಹಾಗೂ ಸರ್ವಧರ್ಮ ಸಮನ್ವಯತೆಯ ಕೇಂದ್ರವಾಗಿರುವ ಹಜರತ್ ಅರ್ಕಾಟ್ ದರ್ಗಾದ ಉರುಸು ಪ್ರಯುಕ್ತ ಬುಧವಾರ ಭವ್ಯ ಭಕ್ತಿ–ಸದ್ಭಾವ ಯಾತ್ರೆ ನಡೆಯಿತು.

ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳು 'ನಾರಾಯೇ ತಕ್ಬೀರ್ ಅಲ್ಲಾಹು ಅಕ್ಬರ್' ಎಂದು ಭಕ್ತಿಭಾವದಿಂದ ಘೋಷಣೆ ಮೊಳಗಿಸುತ್ತಾ, ಪವಿತ್ರ ಧ್ವಜಗಳನ್ನು ಕೈಯಲ್ಲಿ ಹಿಡಿದು ಮೆರವಣಿಗೆಯಲ್ಲಿ ಪಾಲ್ಗೊಂಡರು.

ಪವಿತ್ರ ಪುಷ್ಪಗಳಿಂದ ರೂಪಿಸಲಾದ ಪಂಚ ಝೋಲಾಗಳು ಮೆರವಣಿಗೆಯಲ್ಲಿ ಗಮನ ಸೆಳೆದವು.

ಅರ್ಕಾಟ್ ದರ್ಗಾದ ಸಜ್ಜಾದೆ ನಶೀನ್ ಸೈಯ್ಯದ್ ಇಕ್ಬಾಲ್ ಪೀರಾ ಹಾಗೂ ಡಾ.ತಖೀಪೀರಾ ಹುಸೈನಿ ಅವರ ನೇತೃತ್ವದಲ್ಲಿ ಈ ಯಾತ್ರೆ ಆಯೋಜಿಸಲಾಗಿತ್ತು.

ವಿಜಯಪುರದ ಸೊಲ್ಲಾಪೂರ ನಾಕಾದಿಂದ ಆರಂಭಗೊಂಡ ಈ ಯಾತ್ರೆ ಪ್ರಮುಖ ಮಾರ್ಗಗಳಲ್ಲಿ ಸಂಚರಿಸಿ ಅರ್ಕಾಟ್ ದರ್ಗಾ ತಲುಪಿ ಸಂಪನ್ನಗೊಂಡಿತ್ತು.

**ವಿಶೇಷ ಸನ್ಮಾನ**

ಭವ್ಯ ಸದ್ಭಾವನಾ ಯಾತ್ರೆ ಗಾಂಧಿ ವೃತ್ತದ ಬಳಿ ಬರುತ್ತಿದ್ದಂತೆ ವಿಜಯಪುರ ನಗರ ಭಾಗವಾನ ಜಮಾತ್ ವತಿಯಿಂದ ವಿಶೇಷ ಸನ್ಮಾನ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಧರ್ಮಗುರು ಡಾ.ಸೈಯ್ಯದ್ ತಖೀಪೀರಾ ಹುಸೈನಿ ಮಾತನಾಡಿ, ಹಜರತ್ ಗೌಸ್ ಪಾಕ್ ಅವರು ಒಬ್ಬ ಶ್ರೇಷ್ಠ ವ್ಯಕ್ತಿತ್ವವುಳ್ಳ ಚೇತನ, ಮಾನವೀಯತೆಗೆ ಹೆಸರಾಗಿದ್ದ ಅವರು ಶಾಂತಿ, ಸದ್ಭಾವದ ಸಂದೇಶ ಸಾರಿದ್ದಾರೆ, ಅವರ ತತ್ವಗಳನ್ನು ನಾವು ಅಳವಡಿಸಿಕೊಂಡು ಮುನ್ನಡೆಯಬೇಕು ಎಂದರು.



ಈ ಸಂದರ್ಭದಲ್ಲಿ ಡಾ.ಎಂ.ಎಸ್. ಮುಜಾವರ್, ಇರಾಫ್ ಸುನ್ನೇವಾಲೆ, ಮೆಹತೂಜ್ ಅಲಿ ಭಾಗವಾನ್, ಮೌಲಾನಾ ಹುಸೇನ್ ರಜ್ವಿ, ಮೌಲಾನಾ ನೌಶಾದ್ ಆಲಂ, ಆಶೀಫ ಭಾಗವಾನ, ಫಾರೂಖ ವಾಲೀಕಾರ, ಸಲೀಂ ಮಕಾಂದಾರ, ಸರ್ಫರಾಜ ಮಿರ್ಧೆ ಮತ್ತಿತರರು ಭಾಗವಹಿಸಿದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR